# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು




**ಏಪ್ರಿಲ್ ೨ನೇ ವಾರ**

06-04-2026 TO 11-04-2026

# ಕಾಳಿ ಹುಲಿ ಅಭಯಾರಣ್ಯ: 663 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶ

- ವಿವೇಕದ ವಿತ್ತೀಯ ನೀತಿಯಿಂದ ಬಲ
- ವಿಶ್ವ 10ಕೆ ಓಟ
- ದಕ್ಷಿಣದ ಜನಸಂಖ್ಯೆ ಕುಸಿತ
- ಎನ್‌ಪಿಎಸ್ ಸ್ವಾಸ್ತ್ರ ಯೋಜನೆ

## ❖ 'ಲೋಕ ಅದಾಲತ್ ತೀರ್ಪು ಪ್ರಶ್ನಾತೀತವಲ್ಲ'

**ಸಂದರ್ಭ: 'ಲೋಕ ಅದಾಲತ್ ತೀರ್ಪು ಪ್ರಶ್ನಾತೀತವಲ್ಲ' ಎಂದು ಪ್ರಕರಣವೊಂದರಲ್ಲಿ ಪುನರುಚ್ಚರಿಸಿ ರುವ ಹೈಕೋರ್ಟ್, 'ಲೋಕ ಅದಾಲತ್‌ನಲ್ಲಿ ವ್ಯಾಜ್ಯಕರ್ತ, ಉಭಯ ಪಕ್ಷಗಾರರ ಅನುಪಸ್ಥಿತಿಯಲ್ಲಿ ತೀರ್ಪು ಅಂಗೀಕೃತವಾಗಿದ್ದರೆ ಅಂತಹ ತೀರ್ಪು ಎಲ್ಲ ಕಾಲಕ್ಕೂ ಕಾನೂನುಬದ್ಧ ವಾಗಿದೆ ಮತ್ತು ಸರಿಯಾಗಿದೆ ಎಂದು ಹೇಳಲಾಗದು' ಎಂದು ಸ್ಪಷ್ಟಪಡಿಸಿದೆ.**

- ಮೋಟಾರು ವಾಹನ ಅಪಘಾತ ಪ್ರಕರಣವೊಂದರಲ್ಲಿ ಲೋಕ ಅದಾಲತ್ ತೀರ್ಪು ಪ್ರಶ್ನಿಸಿ ಹುಬ್ಬಳ್ಳಿ ಆನಂದನಗರದ ಬಡ ಕುಟುಂಬದ ತಾಯಿ-ಮಗ, ಶೈಲಾ ಐ ಕರ್ಕಿಹಳ್ಳಿಮಠ (37) ಮತ್ತು ವಿಶಾಲ್ ಐ ಕರ್ಕಿಹಳ್ಳಿಮಠ (11) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.
- 'ಲೋಕ ಅದಾಲತ್‌ನಲ್ಲಿ ನಮಗೆ ನೀಡಲಾಗಿದ್ದ ಪರಿಹಾರದ ಮೊತ್ತವನ್ನು ಕಡಿಮೆ ಮಾಡಿರುವುದು ತಪ್ಪಾಗಿದೆ. ನಮ್ಮ ಪರವಾದ ಹಿಂದಿನ ವಕೀಲರು ಮತ್ತು ವಿಮಾ ಕಂಪನಿಯ ನಡುವೆ ಇತ್ಯರ್ಥ ಮಾಡಿಕೊಳ್ಳಲಾಗಿದೆ ಎಂಬುದು ನಮಗೆ ಯಾವತ್ತೂ ಗಮನಕ್ಕೆ ಬಂದೇ ಇರಲಿಲ್ಲ. ಆದ್ದರಿಂದ, ಲೋಕ ಅದಾಲತ್‌ನಲ್ಲಿ ಪರಿಹಾರದ ಮೊತ್ತವನ್ನು ಕಡಿಮೆ ಮಾಡಿ ಆದೇಶಿಸಿರುವುದನ್ನು ನಾವು ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂಬ ಅರ್ಜಿದಾರರ ವಾದವನ್ನು ನ್ಯಾಯಪೀಠ ಮನ್ನಿಸಿದೆ.
- 'ಅರ್ಜಿ ದಾಖಲಿಸಿದ ದಿನದಿಂದ ಅರ್ಜಿದಾರರಿಗೆ ಪಾವತಿಯಾಗುವ ದಿನದವರೆಗೆ ವಾರ್ಷಿಕ ಶೇ 6ರ ಬಡ್ಡಿಯಂತೆ ₹9,18,600 ಪರಿಹಾರ ನೀಡಬೇಕು' ಎಂಬ ನ್ಯಾಯಮಂಡಳಿ ಆದೇಶವನ್ನು ಪುನರ್‌ಸ್ಥಾಪಿಸಿದೆ.
- 'ಅರ್ಜಿದಾರರ ಪರ ಅವರ ವಕೀಲರು ಸಹಿ ಮಾಡಿದ್ದಾರೆ. ಒಂದು ವೇಳೆ ಈ ರಿಟ್ ಅರ್ಜಿಯನ್ನು ಮನ್ನಿಸಿದರೆ ಪಂಡೋರಾ ಪೆಟ್ಟಿಗೆಯ ಬಾಯಿ ತೆಗೆದಂತಾಗುತ್ತದೆ. ಅನಿರೀಕ್ಷಿತ ಸಮಸ್ಯೆಗಳ ಸೃಷ್ಟಿಗೆ ಕಾರಣ ವಾಗುತ್ತದೆ' ಎಂದು ಪ್ರತಿವಾದಿ ಇನ್ಶೂರೆನ್ಸ್ ಕಂಪನಿ ವಾದವನ್ನು ತಳ್ಳಿ ಹಾಕಿರುವ ನ್ಯಾಯಪೀಠ, 'ಅರ್ಜಿದಾರರು ಜಂಟಿ ಮೆಮೊಗೆ (ಜ್ಞಾಪನ ಪತ್ರ) ಸಹಿ ಹಾಕಿಲ್ಲ ಎಂಬುದು ಗಮನಾರ್ಹ ಅಂಶ' ಎಂದು ಯೋಗ್ಯತೆಯ ಆಧಾರದಡಿ ಅರ್ಜಿದಾರರ ಮನವಿಯನ್ನು ಪರಿಗಣಿಸಿದೆ.
- 'ಲೋಕ ಅದಾಲತ್‌ನಲ್ಲಿ ಉಭಯ ಪಕ್ಷಗಾರರು ಒಪ್ಪಂದದ ನಿಯಮ 'ಗಳನ್ನು ಸಂಪೂರ್ಣವಾಗಿ ಅರ್ಥಮಾಡಿ ಕೊಂಡಿದ್ದಾರೆ ಮತ್ತು ಅದಾಲತ್‌ನ ಹೊರಗೆ ಮಾಡಿಕೊಂಡ ಯಾವುದೇ ಒಪ್ಪಂದಕ್ಕೆ ಅವರು ಸಹಿ ಹಾಕುವುದಿಲ್ಲ ಎಂಬುದನ್ನು ಲೋಕ ಅದಾಲತ್ ಸದಸ್ಯರು ಖಚಿತಪಡಿಸಿಕೊಳ್ಳಬೇಕು' ಎಂದು ನ್ಯಾಯಪೀಠ ಎಚ್ಚರಿಸಿದೆ.

## ❖ ಜಿಡಿಪಿ ಅಂದಾಜು ತಗ್ಗಿಸಿದ ಮೂಡೀಸ್

**ಸಂದರ್ಭ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಪರಿಣಾಮವಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರ ಶೇ 6ಕ್ಕೆ ಇಳಿಯಬಹುದು ಎಂದು ಜಾಗತಿಕ ರೇಟಿಂಗ್ ಸಂಸ್ಥೆ ಮೂಡೀಸ್ ಹೇಳಿದೆ.**

- ದೇಶದ ಜಿಡಿಪಿ ಪ್ರಗತಿ ಶೇ 6.8ರಷ್ಟು ಇರಲಿದೆ ಎಂದು ಸಂಸ್ಥೆಯು ಈ ಮೊದಲು ಅಂದಾಜಿಸಿತ್ತು.
- ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು, ದೇಶದ ಆರ್ಥಿಕತೆಯ ಬೆಳವಣಿಗೆ ದರವನ್ನು ನಿಧಾನವಾಗಿಸಲಿದೆ ಮತ್ತು ಹಣದುಬ್ಬರವನ್ನು ಹೆಚ್ಚಿಸಲಿದೆ ಎಂದು ಅದು ಅಂದಾಜಿಸಿದೆ.
- ಚಿಲ್ಲರೆ ಹಣದುಬ್ಬರವು ಈಗ ಆರ್‌ಬಿಐನ ತಾಳಿಕೆ ಮಟ್ಟದಲ್ಲಿಯೇ ಇದೆ. ಆದರೆ, ಜಾಗತಿಕ ಅನಿಶ್ಚಿತತೆಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹಣದುಬ್ಬರ ಶೇ 4.8ಕ್ಕೆ ಹೆಚ್ಚಳವಾಗುವ ನಿರೀಕ್ಷೆ ಇದೆ. ಇದು ಕಳೆದ ಆರ್ಥಿಕ ವರ್ಷದಲ್ಲಿ ಶೇ 2.4ರಷ್ಟಿತ್ತು ಎಂದು ತನ್ನ ವರದಿಯಲ್ಲಿ ತಿಳಿಸಿದೆ.

Dr. Rajkumar IAS/KAS Academy

- ಸಂಘರ್ಷವು ದೀರ್ಘಾವಧಿಗೆ ಮುಂದುವರಿದರೆ ಪ್ರಮುಖವಾಗಿ ಎಲ್‌ಪಿಜಿ ಸಾಗಣೆಯಲ್ಲಿ ಅಡಚಣೆ ಉಂಟಾಗಲಿದೆ. ಇಂಧನ ಮತ್ತು ಸಾಗಣೆ ವೆಚ್ಚವು ಸಹ ಹೆಚ್ಚಳವಾಗಲಿದೆ. ದೇಶವು ರಸಗೊಬ್ಬರದ ಆಮದಿನ ಮೇಲೆ ಹೆಚ್ಚಾಗಿ ಅವಲಂಬಿಸಿರುವುದರಿಂದ, ಆಹಾರ ಹಣದುಬ್ಬರ ಏರಿಕೆಯಾಗಬಹುದು ಎಂದು ಹೇಳಿದೆ.

## ❖ ತೈಲಕ್ಕೆ ಒಎಂಸಿಗಳಿಂದ ಕಡಿಮೆ ದುಡ್ಡು

**ಸಂದರ್ಭ: ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ತಮಗೆ ಪೆಟ್ರೋಲ್, ಡೀಸೆಲ್, ವಿಮಾನ ಇಂಧನ ಮತ್ತು ಸೀಮೆಎಣ್ಣೆ ಪೂರೈಸುವ ತೈಲ ಸಂಸ್ಕರಣಾ ಕಂಪನಿಗಳಿಗೆ ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆ ನೀಡಲಿವೆ.**

- ದೇಶದಲ್ಲಿ ಇಂಧನ ಬೆಲೆಯನ್ನು ನಿಯಂತ್ರಣ ಮುಕ್ತ ಆಗಿಸಿದ ನಂತರದಲ್ಲಿ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಇದೇ ಮೊದಲ ಬಾರಿಗೆ ಇಂತಹ ಕ್ರಮದ ಮೊರೆ ಹೋಗಿವೆ. ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಮಾರಾಟ ಬೆಲೆಯನ್ನು ಹಚ್ಚಿಸಿಲ್ಲದ ಕಾರಣದಿಂದಾಗಿ ತಮಗೆ ಆಗುತ್ತಿರುವ ನಷ್ಟವನ್ನು ಮಿತಿಗೊಳಿಸಲು ಕಂಪನಿಗಳು ಹೀಗೆ ಮಾಡುತ್ತಿವೆ ಎಂದು ಮೂಲಗಳು ಹೇಳಿವೆ.
- ತೈಲೋತ್ಪನ್ನಗಳ ಮಾರಾಟ ಕಂಪನಿ ಗಳು (ಒಎಂಸಿ) ತಾವು ಖರೀದಿಸುವ ಪೆಟ್ರೋಲಿಯಂ ಉತ್ಪನ್ನಗಳಿಗೆ ಪ್ರತಿ ಯಾಗಿ ಸಂಸ್ಕರಣಾ ಕಂಪನಿಗಳಿಗೆ ಕೊಡ ಬೇಕಿರುವ ಮೊತ್ತವನ್ನು ಮಾರ್ಚ್ 26ರಂದು ಅಂತಿಮಗೊಳಿಸಿವೆ. ಈ ಮೊತ್ತವು ಆಮದು ವೆಚ್ಚಕ್ಕೆ ಹೋಲಿಸಿ ದರೆ ಲೀಟರಿಗೆ 60ರವರೆಗೆ ಕಡಿಮೆ ಇದೆ
- ಎಂದು ಅಧಿಕಾರಿಗಳುಹೇಳಿದ್ದಾರೆ. ಒಎಂಸಿಗಳು ಕಡಿಮೆ ಮೊತ್ತ ಪಾವತಿ ಮಾಡುತ್ತಿರುವುದರಿಂದಾಗಿ ಎಂಆರ್‌ಪಿಎಲ್, ಸಿಪಿಸಿಎಲ್ ಮತ್ತು ಎಚ್‌ಎಂಇಎಲ್‌ನಂತಹ ಸಂಸ್ಕರಣಾ ಕಂಪನಿಗಳಿಗೆ ಹೆಚ್ಚು ತೊಂದರೆ ಆಗುತ್ತಿದೆ.
- ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭ ವಾಗುವುದಕ್ಕೆ ಮೊದಲು ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರಲ್‌ಗೆ 70 ಡಾಲರ್‌ನಷ್ಟಿತ್ತು ಅದು ಈಗ 100 ಡಾಲರ್ ದಾಟಿದೆ. ಹೀಗಿದ್ದರೂ ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಿಲ್ಲ. ಇದರಿಂದಾಗಿ ಒಎಂಸಿಗಳು ನಷ್ಟ ಅನುಭವಿಸುತ್ತಿವೆ.
- ಯುದ್ಧವು ತಕ್ಷಣಕ್ಕೆ ನಿಲ್ಲುವ ಸೂಚನೆಗಳು ಇಲ್ಲ ಹೀಗಾಗಿ ಒಎಂಸಿಗಳು ಸಂಸ್ಕರಣಾ ಕಂಪನಿಗಳಿಗೆ ಕಡಿಮೆ ಮೊತ್ತ ನೀಡಲು ತೀರ್ಮಾನಿಸಿವೆ. ಮಾರ್ಚ್ ದ್ವಿತೀಯಾರ್ಧಕ್ಕೆ ಒಎಂಸಿಗಳು ಸಂಸ್ಕರಣಾ ಕಂಪನಿಗಳು ಲೀಟರ್ ಡೀಸೆಲ್‌ಗೆ ₹22.34ರನ್ನು ಕಡಿಮೆ ನಿಗದಿ ಮಾಡಿವೆ ಆದರೆ ಏಪ್ರಿಲ್ ಪ್ರಥಮಾರ್ಧಕ್ಕೆ ನಿಗದಿ ಮಾಡಿರುವ ಬೆಲೆಯು ಲೀಟರ್ ಡೀಸೆಲ್ ಗೆ ₹60ರಷ್ಟು ಕಡಿಮೆ.
- ವಿಮಾನ ಇಂಧನ ಹಾಗೂ ಸೀಮೆ ಎಣ್ಣೆಗೆ ನೀಡುವ ದರವನ್ನೂ ಒಎಂಸಿಗಳು ಕಡಿಮೆ ಮಾಡಿವೆ ಎಂದು ಗೊತ್ತಾಗಿದೆ ಈ ವಿಚಾರವಾಗಿ ಇಂಡಿಯನ್ ಆಯಿಲ್ ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಂಪನಿಗಳಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಸಿಕ್ಕಿಲ್ಲ.

## ❖ ಹೊರ್ಮುಜ್ ಮುಕ್ತ ಕುರಿತು ಇರಾನ್ -ಒಮಾನ್ ಮಾತುಕತೆ

- ಮಸ್ಕತ್ (ಎಎಫ್‌ಪಿ) ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವ ಕುರಿತು ಇರಾನ್ ಮತ್ತು ಒಮಾನ್ ಮಾತುಕತೆ ನಡೆಸಿವೆ ಎಂದು ಒಮಾನ್‌ನ ಸರ್ಕಾರಿ ಒಡೆತನದ ಸುದ್ದಿ ಸಂಸ್ಥೆ ವರದಿ ಮಾಡಿದೆ.
- ಉಭಯ ದೇಶಗಳ ವಿದೇಶಾಂಗ ಸಚಿವಾಲಯಗಳ ಉಪ ಸಚಿವರ ಮಟ್ಟದಲ್ಲಿ ಸಭೆ ನಡೆಸಲಾಗಿದೆ. ಈ ವೇಳೆ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವ ಕುರಿತು ಚರ್ಚಿಸಲಾಯಿತು' ಎಂದು ಸುದ್ದಿಸಂಸ್ಥೆಯು ತಿಳಿಸಿದೆ.

Dr. Rajkumar IAS/KAS Academy

## ❖ ಐಆರ್‌ಸಿಟಿಸಿ ತರಾಟೆಗೆ ತೆಗೆದುಕೊಂಡ ಸಿಐಸಿ

**ಸಂದರ್ಭ: 2015ರಲ್ಲಿ ನಡೆದ 'ರೈಲ್ ನೀರ್ ಹಗರಣ ಕುರಿತು ಸಿಬಿಐ ಮತ್ತು ಇ.ಡಿ ನಡೆಸಿರುವ ತನಿಖೆಯ ವಿವರವನ್ನು ಆರ್‌ಟಿಐ ಅರ್ಜಿದಾರರಿಗೆ ನೀಡಲು ನಿರಾಕರಿಸಿದಕ್ಕಾಗಿ ಕೇಂದ್ರ ಮಾಹಿತಿ ಆಯೋಗ, ಭಾರತೀಯ ರೈಲ್ವೆ ಆಹಾರ ಸರಬರಾಜು ಮತ್ತು ಪ್ರವಾಸೋದ್ಯಮವನ್ನು (ಐಆರ್‌ಸಿಟಿಸಿ) ತರಾಟೆಗೆ ತೆಗೆದುಕೊಂಡಿದೆ.**

- 'ರೈಲ್ ನೀರ್' ಹಗರಣದಲ್ಲಿ ತಾವು ಶಾಮೀಲಾಗಿರುವುದು ಸತ್ಯವೋ ಅಲ್ಲವೋ ಎಂದು ಸಿಬಿಐ ಮತ್ತು ಇ.ಡಿ. ಎದುರು ಬಿಡರ್‌ಗಳು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆಯೇ?' ಎಂದು ಕೋರಿ ಆರ್‌ಟಿಐ ಅರ್ಜಿದಾರರು ಐಆರ್‌ಸಿಟಿಸಿಯಿಂದ ಮಾಹಿತಿ ಕೇಳಿದ್ದರು.
- ಐಆರ್‌ಸಿಟಿಸಿಯು ಈ ದತ್ತಾಂಶಗಳನ್ನು ನೀಡಲುನಿರಾಕರಿಸಿದಲ್ಲದೇ, 'ಆರ್‌ಟಿಐ, 2005ರ ಸೆಕ್ಷನ್ 8 (ಡಿ) ಪ್ರಕಾರ, ಅರ್ಜಿದಾರರು ಕೋರಿದ ಮಾಹಿತಿಯನ್ನು ಬಹಿರಂಗಪಡಿಸಲಾಗದು' ಎಂದಿದೆ.
- 2025ರ ಆರ್‌ಟಿಐ ಕಾಯ್ದೆಯ ಸೆಕ್ಷನ್ 8(1)(ಡಿ) ಪ್ರಕಾರ, ವಾಣಿಜ್ಯ ವಹಿವಾಟಿನ ಗೋಪ್ಯತೆ, ವ್ಯಾಪಾರ ರಹಸ್ಯಗಳು ಅಥವಾ ಬೌದ್ಧಿಕ ಆಸ್ತಿಯನ್ನು ಒಳಗೊಂಡಿರುವ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ವಿನಾಯಿತಿ ನೀಡುತ್ತದೆ. ಇದನ್ನು ಬಹಿರಂಗಪಡಿಸು ವುದರಿಂದ ಥರ್ಡ್ ಪಾರ್ಟಿಯ ಸ್ಪರ್ಧಾತ್ಮಕ ಸ್ಥಾನಕ್ಕೆ ಹಾನಿಯಾಗುತ್ತದೆ' ಎಂದು ಐಆರ್‌ಸಿಟಿಸಿ ಹೇಳಿದೆ.
- ಐಆರ್‌ಸಿಟಿಸಿ ನೀಡಿರುವ ಉತ್ತರವನ್ನು ದೋಷಪೂರಿತಎಂದು ಪರಿಗಣಿಸಿದ ಸಿಐಸಿ, 'ಈ ಉತ್ತರಗಳು ಆರ್ ಟಿಐ ಕಾಯ್ದೆಯ ನಿಬಂಧನೆಗಳಿಗೆ ಹೊಂದಿಕೆ ಆಗುವುದಿಲ್ಲ ಎಂದು ಹೇಳಿದೆ ಆರ್‌ಟಿಐ ಅರ್ಜಿಯನ್ನು ಮರುಪರಿಶೀಲಿಸಲು ಮತ್ತು 'ಹೊಸ, ತಾರ್ಕಿಕ ಉತ್ತರ' ವನ್ನು ನೀಡಲು ಐಆರ್‌ಸಿಟಿಸಿಗೆ ನಿರ್ದೇಶನ ನೀಡಿದೆ.

## ❖ ಎಸ್‌ಸಿ/ಎಸ್‌ಟಿ, ಒಬಿಸಿ ವಿದ್ಯಾರ್ಥಿಗಳ ಮೀಸಲಾತಿ ಹೆಚ್ಚಳ

**ಸಂದರ್ಭ: ಭುವನೇಶ್ವರ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮೀಸಲಾತಿಯನ್ನು ಹೆಚ್ಚಿಸಿರುವ ಒಡಿಶಾ ಸರ್ಕಾರ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಎಸ್‌ಇಬಿಸಿ) ಮೀಸಲಾತಿಯನ್ನು ಪರಿಚಯಿಸಿದೆ.**

- ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.
- 'ಎಸ್.ಟಿ ವಿದ್ಯಾರ್ಥಿಗಳ ಮೀಸಲಾತಿಯನ್ನು ಶೇ 12ರಿಂದ 22.50ಕ್ಕೆ ಹೆಚ್ಚಿಲಾಗಿದ್ದು, ಎಸ್.ಸಿ.ಗಳಿಗೆ ಶೇ 8ರಿಂದ ಶೇ 16.25ಕ್ಕೆ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರವು ಒಡಿಶಾದಲ್ಲಿ ಎಸ್‌ಇಬಿಸಿ ಎಂದು ಕರೆಯಲ್ಪಡುವ ಒಬಿಸಿ ವಿದ್ಯಾರ್ಥಿಗಳಿಗೆ ಶೇ 11.25 ಮೀಸಲಾತಿಯನ್ನು ಪರಿಚಯಿಸಿದೆ' ಎಂದು ಸಭೆಯ ನಂತರ ಮುಖ್ಯಮಂತ್ರಿ ತಿಳಿಸಿದ್ದಾರೆ.
- 'ರಾಜ್ಯದಲ್ಲಿ ಎಸ್‌ಟಿ ಸಮುದಾಯಗಳ ಜನಸಂಖ್ಯೆಯು ಶೇ 22ಕ್ಕಿಂತ ಹೆಚ್ಚಿದ್ದರೂ, ಹಿಂದಿನಿಂದಲೂ ತಾಂತ್ರಿಕ ವೃತ್ತಿಪರ ಮತ್ತು ವೈದ್ಯಕೀಯ ಮತ್ತು ಸಂಬಂಧಿತ ಕೋರ್ಸ್‌ಗಳಲ್ಲಿ ಅವರಿಗೆ ಮೀಸಲಾತಿ ಕೇವಲ ಶೇ 12ರಷ್ಟು ಮಾತ್ರವಿತ್ತು ಆದ್ದರಿಂದ ಜನಸಂಖ್ಯೆಯಲ್ಲಿ ಅವರ ಅನುಪಾತಕ್ಕೆ ಅನುಗುಣವಾಗಿ ನಾವು ಮೀಸಲಾತಿ ಹೆಚ್ಚಿಸಿದ್ದೇವೆ' ಎಂದು ಮುಖ್ಯಮಂತ್ರಿ ಚರಣ್ ಮಾಝಿ ಹೇಳಿದ್ದಾರೆ.

## ❖ ಸುಸ್ತಿದಾರನಲ್ಲದಿದ್ದರೂ ಬ್ಯಾಂಕ್‌ನಿಂದಲೇ ಲೋಪ: ಋಣಾತ್ಮಕ ಕ್ರೆಡಿಟ್ ಅಂಕ: ನೆರವಿಗೆ ಬಂದ 'ಸುಪ್ರೀಂ'

**ಸಂದರ್ಭ: ಯಾವುದೇ ಸಾಲ ಬಾಕಿ ಇರದಿದ್ದರೂ 'ಋಣಾತ್ಮಕ ಕ್ರೆಡಿಟ್ ಅಂಕ'ದ ಸಮಸ್ಯೆ ಎದುರಿಸುತ್ತಿದ್ದ ವ್ಯಕ್ತಿಗೆ ಸುಪ್ರೀಂ ಕೋರ್ಟ್ ಸಹಾಯಹಸ್ತ ಚಾಚಿದೆ.**


Dr Rajkumar's KAS Academy

- ಉತ್ತರಾಖಂಡ ನಿವಾಸಿ ರಾಜೇಂದ್ರ ಸಿಂಗ್ ಪನ್ನಾರ್ ಅವರು ಯಾವುದೇ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರಲಿಲ್ಲ. ಹೀಗಿದ್ದರೂ 2020ರಿಂದಲೂ ಆರ್ಥಿಕ ದಾಖಲೆಗಳಲ್ಲಿ 'ಋಣಾತ್ಮಕ ಕ್ರೆಡಿಟ್ ಅಂಕ'ವೇ ಕಾಣುತ್ತಿತ್ತು.
- ಪನ್ನಾರ್ ಹೆಸರಿನ ಇನ್ನಿಬ್ಬರು ವ್ಯಕ್ತಿಗಳು ಸಾಲ ಪಡೆದು ಸುಸ್ತಿದಾರರಾದ ಕಾರಣ, ಈ ಸಮಸ್ಯೆ ಉಂಟಾಗಿತ್ತು. ನಂತರ ಹೊಸತಾಗಿ ಪಾನ್ ಕಾರ್ಡ್ ಪಡೆದುಕೊಂಡರೂ, ಹಳೆಯ ಪಾನ್ ಕಾರ್ಡ್‌ನ ಮಾಹಿತಿಯನ್ನು ಸಂಪರ್ಕಿಸಿದ ಕಾರಣ ಸಮಸ್ಯೆ ಮುಂದುವರಿಯಿತು. ಅವರಿಗೆ ಸಾಲ ಪಡೆಯಲು ಸಾಧ್ಯವಾಗಿರಲಿಲ್ಲ. ಇದರಿಂದ ಬೇಸತ್ತಿದ್ದ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.
- ಸಂಸ್ಥೆಯು ಸಾಲಗಾರರಿಗೆ 'ಕ್ರೆಡಿಟ್ ಅಂಕಗಳನ್ನು ನೀಡುತ್ತದೆ. ಆಡುಮಾತಿನಲ್ಲಿ 'ಕ್ರೆಡಿಟ್ ಅಂಕ' ಎನ್ನುವುದು ತಾಂತ್ರಿಕವಾಗಿ 'ಸಿಬಿಲ್ ಸ್ಕೋರ್'
- ಅರ್ಜಿ ವಿಚಾರಣೆ ನಡೆಸಿದನ್ಯಾಯಮೂರ್ತಿ ಜೆಬಿ ಪಾರ್ದೀವಾಲಾ, ಕೆ.ವಿ.ವಿಶ್ವನಾಥನ್ ನೇತೃತ್ವದ ನ್ಯಾಯಪೀಠ, ಪನ್ನಾರ್‌ಅವರು ಸಾಲ ಪಡೆದು ಸುಸ್ತಿದಾರರಾಗಿದ್ದಾರೆಯೇ ಎಂಬುದರ ಕುರಿತು ಮಾಹಿತಿ ನೀಡುವಂತೆ ಪಂಜಾಬ್ ನ್ಯಾಷನಲ್ ಬ್ಯಾಂಕ್(ಪಿಎನ್‌ಬಿ), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ (ಎಸ್‌ಬಿಐ) ನೋಟಿಸ್ ನೀಡಿತ್ತು.
- ಈ ಕುರಿತು ನ್ಯಾಯಾಲಯಕ್ಕೆ ಮಾಹಿತಿ ನೀಡಿರುವ ಪಿಎನ್‌ಬಿ ಬ್ಯಾಂಕ್‌ನ ಅಧಿಕಾರಿಗಳು, 'ಪನ್ನಾರ್ ಯಾವುದೇ ಸಾಲ ಪಡೆದಿಲ್ಲ. ಸುಸ್ತಿದಾರರಾಗಿಲ್ಲ' ಎಂದು ಮಾಹಿತಿ ನೀಡಿದ್ದಾರೆ.
- 'ಪರಿಷ್ಕೃತ ಪ್ಯಾನ್ ಮಾಹಿತಿ ಪಡೆದುಕೊಂಡು ಅರ್ಜಿದಾರರ ಕ್ರೆಡಿಟ್ ಅಂಕವನ್ನು ಸರಿಪಡಿಸಲಾಗುವುದು' ಎಂದು ಎಸ್‌ಬಿಐ ನ್ಯಾಯಾಲಯಕ್ಕೆ ಉತ್ತರಿಸಿದೆ.
- ಇದರ ಬೆನ್ನಲ್ಲೇ ನ್ಯಾಯಾಲಯಕ್ಕೆ ಉತ್ತರಿಸಿದ ಸಿಬಿಲ್ ಸಂಸ್ಥೆ, 'ಪನ್ಮಾರ್ ಅವರ ಹೆಸರಿನಿಂದ ಸೃಷ್ಟಿಯಾದ ಗೊಂದಲಗಳನ್ನು ಬಗೆಹರಿಸಲಾಗಿದ್ದು, ಯಾವುದೇ ಸಮಸ್ಯೆಯಿಲ್ಲ ಎಂದು ತಿಳಿಸಿದೆ.
- ಈ ಮೂಲಕ ಕಳೆದ 6 ವರ್ಷಗಳಿಂದ ಸಂಕಷ್ಟಕ್ಕೆ ಸಿಲುಕಿದ್ದರಾಜೇಂದ್ರ ನ್ಯಾಯಾಲಯದ ಮಧ್ಯಪ್ರವೇಶದಿಂದ ಸಮಸ್ಯೆಯಿಂದ ಪಾರಾಗಿದ್ದಾರೆ.

## ❖ ನ್ಯಾಯಾಂಗ ಮೂಲಸೌಕಾರ್ಯ ಐಚ್ಛಿಕವಲ್ಲ, ಅತ್ಯಗತ್ಯ'

**ಸಂದರ್ಭ: 'ನ್ಯಾಯಾಂಗದ ಮೂಲಸೌಕರ್ಯ ಬಲಪಡಿಸುವುದು ಐಚಿಕವಲ್ಲ, ಬದಲಾಗಿ ಅದೊಂದು ಅತ್ಯಗತ್ಯ ಕೆಲಸ ಎಂಬುದು ಎಲ್ಲ ರಾಜ್ಯ ಸರ್ಕಾರಗಳಿಗೂ ಮನವರಿಕೆಯಾಗಿದೆ. ಅಧಿಕಾರದಲ್ಲಿರುವ ರಾಜಕೀಯ ಪಕ್ಷ ಯಾವುದೇ ಆದರೂ ಸರ್ಕಾರಗಳ ಈ ಗ್ರಹಿಕೆಯಲ್ಲಿ ವ್ಯತ್ಯಾಸವಿಲ್ಲ' ಎಂದು ಸುಪ್ರೀಂ ಕೋರ್ಟ್ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಭಾನುವಾರ ಅಭಿಪ್ರಾಯಪಟ್ಟರು.**

- ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಮೂರ್ತಿಗಳ ವಸತಿ ಕಟ್ಟಡಗಳನ್ನು ಒಳಗೊಂಡಿರುವ ತೆಲಂಗಾಣ ಹೈಕೋರ್ಟ್ ವಲಯ-2ರ ಶಂಕುಸ್ಥಾಪನೆಯ ಬಳಿಕ ಮಾತನಾಡಿದ ಸೂರ್ಯಕಾಂತ್ ಅವರು, 'ನ್ಯಾಯಾಂಗ ಮತ್ತು ಕಾರ್ಯಾಂಗ ಒಟ್ಟಾಗಿ ಸಾಮರಸ್ಯದಿಂದ ಕೆಲಸ ಮಾಡಿದಾಗ ಮಾತ್ರ ಸಂವಿಧಾನ ನಿಜವಾಗಿಯೂ ಜೀವಂತವಾಗಿರುತ್ತದೆ' ಎಂದರು.
- ನೀಲನಕ್ಷೆ ಮತ್ತು ಮಾದರಿಗಳನ್ನು ವೀಕ್ಷಿಸಿದ ಅವರು, '100 ಎಕರೆಯ ಈ ಹೈಕೋರ್ಟ್ ಸಂಕೀರ್ಣದ ಪ್ರಸ್ತಾವವು ದೇಶದಲ್ಲೇ ಅತ್ಯುತ್ತಮವಾದದ್ದು. ಸಂಪೂರ್ಣ ಹೈಕೋರ್ಟ್ ಸಂಕೀರ್ಣವನ್ನು ಇನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ, ಅವರು ಭರವಸೆ ನೀಡಿದ್ದಾರೆ' ಎಂದು ಸೂರ್ಯಕಾಂತ್ ತಿಳಿಸಿದರು.
- 'ಕಳೆದ ಕೆಲವು ತಿಂಗಳುಗಳಲ್ಲಿಯೇ ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ಆಂಧ್ರ ಪ್ರದೇಶ, ಅಸ್ಸಾಂ ಮತ್ತು ಈಗ ತೆಲಂಗಾಣದಲ್ಲಿ ನ್ಯಾಯಾಲಯ ಸಂಕೀರ್ಣಗಳಿಗೆ ಶಂಕುಸ್ಥಾಪನೆ ಮಾಡುವ ಭಾಗ್ಯ ನನಗೆ ದೊರೆತಿದೆ' ಎಂದು ಹೇಳಿದರು.

Dr. Rajkumar IAS/KAS Academy

## ❖ ಜಗ್ಗಿ ಹತ್ಯೆ ಪ್ರಕರಣ: ಅಮಿತ್ ಜೋಗಿಗೆ ಜೀವಾವಧಿ ಶಿಕ್ಷೆ

**ಸಂದರ್ಭ: 2003ರಲ್ಲಿ ನಡೆದಿದ್ದ ಎನ್‌ಸಿಪಿ ನಾಯಕ ರಾಮಾವತಾರ ಜಗ್ಗಿ, ಅವರ ಹತ್ಯೆ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಅಜಿತ್ ಜೋಗಿ ಅವರ ಮಗ ಅಮಿತ್ ಜೋಗಿಗೆ ಛತ್ತೀಸಗಢ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.**

- 'ಈ ಪಿತೂರಿಯ ಹಿಂದಿನ ಸೂತ್ರಧಾರ ಅಮಿತ್ ಜೋಗಿ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.
- ಮುಖ್ಯ ನ್ಯಾಯಮೂರ್ತಿ ರಮೇಶ್ ಸಿನ್ಹಾ ಮತ್ತು ನ್ಯಾಯಮೂರ್ತಿ ಅರವಿಂದ್ ಕುಮಾರ್ ವರ್ಮಾ ಅವರನ್ನೊಳಗೊಂಡ ವಿಭಾಗೀಯ ಪೀಠವು ಏಪ್ರಿಲ್ 2ರಂದು ಈ ಆದೇಶ ನೀಡಿತ್ತು ಅದರ ಪ್ರತಿ ಲಭ್ಯವಾಗಿದೆ.
- ಅಮಿತ್ ಜೋಗಿಯನ್ನು ಖುಲಾಸೆಗೊಳಿಸಿ ವಿಚಾರಣಾ ನ್ಯಾಯಾಲಯ ನೀಡಿದ 2007ರ ಆದೇಶವನ್ನು ರದ್ದುಗೊಳಿಸಿದ್ದ ವಿಭಾಗೀಯ ಪೀಠ, 'ಇದು ಸ್ಪಷ್ಟವಾಗಿ ಕಾನೂನುಬಾಹಿರ, ವಿಕೃತ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಗಳಿಗೆ ವಿರುದ್ಧವಾಗಿದೆ' ಎಂದು ಹೇಳಿದೆ. ಅಪರಾಧಿಗೆ ₹1 ಸಾವಿರ ದಂಡ ವಿಧಿಸಿದೆ. ದಂಡ ಪಾವತಿಸಲು ವಿಫಲರಾದರೆ ಹೆಚ್ಚುವರಿಯಾಗಿ 6 ತಿಂಗಳು ಜೈಲು ಶಿಕ್ಷೆ ಅನುಭವಿಸಬೇಕು ಎಂದು ಹೇಳಿದೆ.
- 2003ರ ಜೂನ್ 4ರಂದು ರಾಯಪುರದಲ್ಲಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಎನ್‌ಸಿಪಿ ನಾಯಕ ಜಗ್ಗಿ ಅವರ ಮೇಲೆ ಗುಂಡು ಹಾರಿಸಲಾಗಿತ್ತು. ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸ ಲಾಗಿತ್ತು. ಮರುದಿನ ಮೃತಪಟ್ಟಿದ್ದರು. ಆ ಸಮಯದಲ್ಲಿ ಅಜಿತ್ ಜೋಗಿ ಮುಖ್ಯಮಂತ್ರಿಯಾಗಿದ್ದರು.

ನರಮೇಧದ ಅಸ್ತ್ರದಿಂದ ಮಾನವೀಯತೆಯನ್ನೇ 'ಮಣ್ಣು' ಮಾಡಿದ ದುರಂತ ಕಥೆ

# ಪ್ಯಾಲೆಸ್ಟೀನ್ ಕಣ್ಣೀರು

ಆಕ್ರಮಿತ ಪ್ಯಾಲೆಸ್ತೀನ್‌ನಲ್ಲಿನ ಸ್ಥಿತಿಗತಿ ಮತ್ತು ಅಲ್ಲಿ ಇಸ್ರೇಲ್ ಮೆರೆದಿರುವ ಕ್ರೌರ್ಯದ ಬಗ್ಗೆ ವಿಶ್ವಸಂಸ್ಥೆ ವರದಿಯು ಹತ್ಯೆಗಳ, ಹಿಂಸೆಯ ಮತ್ತು ನರಮೇಧಕ್ಕೆ ಕಾರಣವಾಗಿರುವ ಮನುಷ್ಯರ ಅಮಾನವೀಯತೆಯ ಮತ್ತೊಂದು ಹೇಯ ಅಧ್ಯಾಯವನ್ನು ದಾಖಲಿಸಿದೆ. ಈ ವರದಿಯಲ್ಲಿರುವುದು ಆತ್ಮಸಾಕ್ಷಿಯ ಧ್ವನಿ. ಜಗತ್ತಿನ ಕಣ್ಣ ಮುಂದೆಯೇ ಇಂತಹ ದುರಂತಗಳು ನಡೆಯುತ್ತಿದ್ದರೂ, ಅದನ್ನು ಗಮನಿಸದಿರುವುದು ರಾಜಕಾರಣದ ವೈಫಲ್ಯ ಮಾತ್ರವಲ್ಲ, ಅಂತಃಸಾಕ್ಷಿಯ ಅಧಃಪತನವೂ ಹೌದು

• ಎ.ವಿ.ಎಸ್.ನಂಬೂದಿರಿ





ಫ್ರಾನ್ಸೆಸ್ಕಾ ಅಲ್ಬನೀಸ್

## ❖ ಶೇ 90ರ ಮಟ್ಟಕ್ಕೆ ಪೂರೈಕೆ ಅಮೆರಿಕ, ಆಸ್ಟ್ರೇಲಿಯಾ, ರಷ್ಯಾದಿಂದ ಖರೀದಿ: ಕೇಂದ್ರ

**ಸಂದರ್ಭ: ರಸಗೊಬ್ಬರ ತಯಾರಿಕಾ ಘಟಕಗಳಿಗೆ ನೈಸರ್ಗಿಕ ಅನಿಲ ಪೂರೈಕೆಯನ್ನು ಅವುಗಳ ಅಗತ್ಯದಶೇ 90ರ ಮಟ್ಟಕ್ಕೆ ಹೆಚ್ಚು ಮಾಡಲಾಗಿದೆ.**

- ತೈಲೋತ್ಪನ್ನಗಳ ಮಾರಾಟ ಕಂಪನಿಗಳು ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಮಾರುಕಟ್ಟೆಯಲ್ಲಿನ ತಕ್ಷಣದ ಲಭ್ಯತೆ ಆಧಾರದಲ್ಲಿ (ಸ್ಪಾಟ್ ಮಾರ್ಕೆಟ್) ಖರೀದಿಸಲು ಆರಂಭಿಸಿದ ನಂತರದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.
- ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಕೊಲ್ಲಿ ರಾಷ್ಟ್ರಗಳಿಂದ ಭಾರತಕ್ಕೆ ಇಂಧನ ಆಮದು ಮಾಡಿಕೊಳ್ಳುವ ವ್ಯವಸ್ಥೆಯಲ್ಲಿ ಅಡಚಣೆ ಸೃಷ್ಟಿಸಿದ ನಂತರದಲ್ಲಿ ಕೇಂದ್ರ ಸರ್ಕಾರವು ಯೂರಿಯಾ ಉತ್ಪಾದನಾ ಘಟಕಗಳಿಗೆ ಅನಿಲ ಪೂರೈಕೆಯನ್ನು ಅವುಗಳ ಅಗತ್ಯದ ಶೇ 60ರ ಮಟ್ಟಕ್ಕೆ ಮಿತಿಗೊಳಿಸಿತ್ತು ನಂತರದಲ್ಲಿ ಇದನ್ನು ಶೇ 80ರವರೆಗೆ ಹೆಚ್ಚಿಸಲಾಗಿತ್ತು.
- ಸೋಮವಾರದಿಂದ ಅನ್ವಯ ಆಗುವಂತೆ ಅನಿಲ ಪೂರೈಕೆಯನ್ನು ರಸಗೊಬ್ಬರ ತಯಾರಿಕಾ ಘಟಕಗಳ ಆರು ತಿಂಗಳ ಸರಾಸರಿ ಬಳಕೆಯ ಶೇ 90ರ ಮಟ್ಟಕ್ಕೆ ಹೆಚ್ಚು ಮಾಡಲಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.
- ಕತಾರ್‌ನಿಂದ ಎಲ್‌ಎನ್‌ಜಿ ಪೂರೈಕೆ ಆಗುತ್ತಿಲ್ಲ, ಆದರೆ ಭಾರತದ ಕಂಪನಿಗಳು ಅಮೆರಿಕ, ಆಸ್ಟ್ರೇಲಿಯಾ ಮತ್ತು ಶಷ್ಯಾದಿಂದ ಅದನ್ನು ಖರೀದಿಸುತ್ತಿವೆ.
- ಪೂರೈಕೆ ಹೆಚ್ಚಿರುವ ಕಾರಣದಿಂದಾಗಿ ವಿವಿಧ ವಲಯಗಳಿಗೆ ಅನಿಲ ಪೂರೈಕೆಯನ್ನು ಹೆಚ್ಚು ಮಾಡಲಾಗಿದೆ. ಇತರ ಕೈಗಾರಿಕಾ ವಲಯಗಳಿಗೆ, ವಾಣಿಜ್ಯ ವಲಯಗಳಿಗೆ ಅನಿಲ ಪೂರೈಕೆಯನ್ನು ಶೇ 10ರಷ್ಟು ಹೆಚ್ಚು ಮಾಡಲಾಗುತ್ತದೆ ಎಂದು ಸುಜಾತಾ ಅವರು ಹೇಳಿದ್ದಾರೆ.
- ಹೋಟೆಲ್ ಮತ್ತು ರೆಸ್ಟಾರೆಂಟ್‌ಗಳಲ್ಲಿ ಬಳಸುವ ವಾಣಿಜ್ಯ ಎಲ್‌ಪಿಜಿಯನ್ನು ಬಿಕ್ಕಟ್ಟು ಆರಂಭವಾಗುವುದಕ್ಕಿಂತ ಮೊದಲಿನ ಬೇಡಿಕೆಯ ಶೇ 70ರ ಪ್ರಮಾಣದಲ್ಲಿ ಪೂರೈಸಲಾಗುತ್ತಿದೆ.

## ❖ 'ವಿವೇಕದ ವಿತ್ತೀಯ ನೀತಿಯಿಂದ ಬಲ'

**ಸಂದರ್ಭ: ಕೇಂದ್ರ ಸರ್ಕಾರ ಪಾಲಿಸಿದ ವಿವೇಕಯುತವಾದ ವಿತ್ತೀಯ ನೀತಿಯು ಬಂಡವಾಳ ವೆಚ್ಚವನ್ನು ಮುಂದುವರಿಸಲು ಹಾಗೂ ಯುದ್ಧದಿಂದಾಗಿ ತೊಂದರೆಗೆ ಒಳಗಾಗಿರುವ ವಲಯಗಳಿಗೆ ನೆರವು ಒದಗಿಸುವ ಬಲವನ್ನು ತಂದುಕೊಟ್ಟಿದೆ ಎಂದು ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.**

- ಪರಿಸ್ಥಿತಿಯನ್ನು ನಿಭಾಯಿಸಲು ಆರ್‌ಬಿಐ ರೆಪೊ ದರವನ್ನು ಇನ್ನಷ್ಟು ತಗ್ಗಿಸಬಹುದು ಎಂದು ಅವರು ಹೇಳಿದ್ದಾರೆ.
- ಭಾರಿ ಮೊತ್ತದ ಸಾಲ ಹೊತ್ತಿರುವ ಹಾಗೂ ಭಾರಿ ಪ್ರಮಾಣದ ವಿತ್ತೀಯ ಕೊರತೆ ಹೊಂದಿರುವ ಹಲವು ದೇಶಗಳು ಇಂದು ಹಣಕಾಸಿನ ವಿಚಾರವಾಗಿ ಹೆಚ್ಚಿನ ಆಯ್ಕೆಗಳನ್ನು ಹೊಂದಿಲ್ಲ. ಒಂದೋ ವೆಚ್ಚ ತಗ್ಗಿಸಬೇಕು ಅಥವಾ ಅಸ್ಥಿರತೆಗೆ ಗುರಿಯಾಗಬೇಕು ಎಂಬಂತಹ ಸ್ಥಿತಿಯನ್ನು ಅವು ಎದುರಿಸುತ್ತಿವೆ ಎಂದು ನಿರ್ಮಲಾ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.
- 'ಆದರೆ ಭಾರತವು ಹಣಕಾಸಿನ ವಿಚಾರದಲ್ಲಿ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುವ ಅವಕಾಶ ಇರಿಸಿಕೊಂಡಿದೆ. ಬಂಡವಾಳ ವೆಚ್ಚ ಮುಂದುವರಿಸಲು, ರೆಪೊ ದರವನ್ನು ತಗ್ಗಿಸಲು, ತೊಂದರೆಗೆ ಒಳಗಾದ ವಲಯಗಳನ್ನು ಗುರಿಯಾಗಿಸಿಕೊಂಡು ನೆರವು ಕ್ರಮಗಳನ್ನು ಜಾರಿಗೆ ತರಲು ಅವಕಾಶ ಇದೆ. ದಶಕದಿಂದ ಪಾಲಿಸಿಕೊಂಡು ಬಂದಿರುವ ಹಣಕಾಸಿನ ಶಿಸ್ತಿನ ಲಾಭ ಇದು' ಎಂದು ಅವರು ವಿವರಿಸಿದ್ದಾರೆ.
- ಭಾರತದಲ್ಲಿ ಸರ್ಕಾರದ ಸಾಲ ಹಾಗೂ ಜಿಡಿಪಿ ನಡುವಿನ ಅನುಪಾತವು ಶೇ 81ರಷ್ಟು ಇದೆ. ಈ ಪ್ರಮಾಣವು ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಜರ್ಮನಿ ನಂತರ ಅತ್ಯಂತ ಕಡಿಮೆ ಎಂದು ನಿರ್ಮಲಾ ಅವರು ಹೇಳಿದ್ದಾರೆ.

Dr. Rajkumar IAS/KAS Academy

## ❖ ವಿಶ್ವ 10ಕೆ ಓಟ: ಬ್ಲಾಂಕಾ ಗ್ಲಾಸಿಕ್ ರಾಯಭಾರಿ

**ಸಂದರ್ಭ: ದಿಗ್ಗಜ ಹೈಜಂಪ್ ಅಸ್ಟ್ರೀಟ್, ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತರಾದ ಬ್ಯಾಂಕಾ ಪ್ಲಾಸಿಕ್ ಅವರು ಇದೇ 26ರಂದು 'ಸಿಲಿಕಾನ್ ಸಿಟಿ'ಯಲ್ಲಿ ನಡೆಯುವ 'ಟಿಸಿಎಸ್ ವಿಶ್ವ 10ಕೆ ಬೆಂಗಳೂರು' ಓಟದ ರಾಯಭಾರಿಯಾಗಿದ್ದಾರೆ.**

- ವಿಶ್ವ ಅಥ್ಲೆಟಿಕ್ಸ್‌ನಿಂದ 'ಗೋಲ್ಡ್ ಲೇಬಲ್ ರೇಸ್' ಮಾನ್ಯತೆ ಪಡೆದಿರುವ 18ನೇ ಆವೃತ್ತಿಯ ಓಟದ ಸ್ಪರ್ಧೆಯು ಒಟ್ಟು ₹1.97 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತನಾಮ ಅಥ್ಲೆಟ್‌ಗಳು ಕಣಕ್ಕಿಳಿಯಲಿದ್ದಾರೆ.
- 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ, 2016ರ ರಿಯೊ ಕೂಟದಲ್ಲಿ ಕಂಚಿನ ಪದಕ ಗೆದ್ದಿರುವ ಕ್ರೊವೇಷ್ಯಾದ ವ್ಯಾಸಿಕ್ ಅವರು ವಿಶ್ವ ಚಾಂಪಿಯನ್‌ಷಿಪ್ ಮತ್ತು ವಿಶ್ವ ಒಳಾಂಗಣ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. 2009ರಲ್ಲಿ ಅವರು ಸಾಧಿಸಿದ 2.08 ಮೀಟರ್ ಜಿಗಿತವು ಕ್ರೊವೇಷ್ಯಾದ ರಾಷ್ಟ್ರೀಯ ದಾಖಲೆಯಾಗಿ ಉಳಿದಿದೆ.
- 'ವಿಶ್ವ 10ಕೆ 18ನೇ ಆವೃತ್ತಿಯ ಭಾಗವಾಗಲು ನನಗೆ ಹೆಮ್ಮೆ ಇದೆ. ಓಟದ ಮೂಲಕ ಸಾವಿರಾರು ಜನರನ್ನು ಒಟ್ಟುಗೂಡಿಸುವ ಈ ಕಾರ್ಯಕ್ರಮ ನಿಜವಾಗಿಯೂ ಸ್ಫೂರ್ತಿದಾಯಕ ಮತ್ತು ಶಕ್ತಿಯುತವಾಗಿದೆ. ಓಟವು ನಮ್ಮನ್ನು ದೈಹಿಕವಾಗಿ ಸಕ್ರಿಯವಾಗಿಸುವ ಜೊತೆಗೆ ಮಾನಸಿಕವಾಗಿ ಸದೃಢಗೊಳಿಸುತ್ತದೆ' ಎಂದು ಶ್ಲಾಸಿಕ್ ಹೇಳಿದ್ದಾರೆ.




## ❖ ಬಾಲಕಿಯರ ಗರ್ಭಧಾರಣೆ: ಲೆಕ್ಕಪರಿಶೋಧನೆ ಕಡ್ಡಾಯ

**ಸಂದರ್ಭ: ರಾಜ್ಯದಲ್ಲಿ 10-18 ವರ್ಷ ವಯಸ್ಸಿನ ಹೆಣ್ಣು ಮಕ್ಕಳ ಆರೋಗ್ಯ ಬಲಪಡಿಸುವ ಸಲುವಾಗಿ ಹದಿಹರೆಯದ ಗರ್ಭಧಾರಣೆ ಪ್ರಕರಣಗಳನ್ನು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಆರ್‌ಸಿಎಚ್ ವೇದಿಕೆಯಲ್ಲಿ ಕಡ್ಡಾಯವಾಗಿ ವರದಿ ಮಾಡಬೇಕು. ಸಂಬಂಧಪಟ್ಟ ತಾಲ್ಲೂಕು ಆರೋಗ್ಯಾಧಿಕಾರಿ ಲೆಕ್ಕಪರಿಶೋಧನೆ ನಡೆಸಿ ವರದಿ ನೀಡಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.**


- ಈ ವಯಸ್ಸಿನ ಹೆಣ್ಣುಮಕ್ಕಳಲ್ಲಿ ಗರ್ಭಧಾರಣೆಯು ತಾಯಿಗೆ ತೊಡಕು, ಹೆರಿಗೆಯ ವೇಳೆ ಅನಾನುಕೂಲ, ಸಾಮಾಜಿಕ ಸಮಸ್ಯೆಗಳ ಅಪಾಯವನ್ನು ಸೃಷ್ಟಿಸುತ್ತದೆ ಹದಿಹರೆಯದ ಗರ್ಭಧಾರಣೆಗಳು ವರದಿ ಆಗುತ್ತಲೇ ಇವೆ. ಇವು ಬಾಲ್ಯವಿವಾಹ, ಶಿಕ್ಷಣ ಮೊಟಕುಗೊಳಿಸುವುದು, ಸಾಮಾಜಿಕ ಸಮಸ್ಯೆ.
- ಸರ್ಕಾರಿ ಸೇವೆಗಳನ್ನು ಪಡೆಯುವಲ್ಲಿ ಅಡಚಣೆ ಉಂಟು ಮಾಡಬಹುದು ಹೀಗಾಗಿ ಅಂತಹ ಪ್ರಕರಣಗಳನ್ನು ಪರಿಶೀಲಿಸಲು ವ್ಯವಸ್ಥಿತ ಕಾರ್ಯವಿಧಾನ ಅಗತ್ಯ ಹಾಗಾಗಿ ಕಡ್ಡಾಯ ಲೆಕ್ಕ ಪರಿಶೋಧನೆ ನಡೆಸಬೇಕು. ಈ ಮೂಲಕ ಹದಿಹರೆಯದ ಗರ್ಭಧಾರಣೆಯನ್ನು ತಡೆಗಟ್ಟುವ ಗುರಿ ಹೊಂದಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.
- ಮದುವೆ ವಯಸ್ಸು, ಶೈಕ್ಷಣಿಕ ಸ್ಥಿತಿ, ಶಾಲಾ ಹಾಜರಾತಿ, ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ, ಜಾಗೃತಿ, ಗರ್ಭನಿರೋಧಕ ಮತ್ತು ಸಮಾಲೋಚನೆಗಳ ಸೇವೆಗಳ ಲಭ್ಯತೆ, ಸಾಮಾಜಿಕ ಆರ್ಥಿಕ ಮತ್ತು ಕೌಟುಂಬಿಕ ದೌರ್ಬಲ್ಯ, ಆರ್‌ಕೆಎಸ್‌ಕೆ, ಐಸಿಡಿಎಸ್ ಮತ್ತು ಶಾಲಾ ಆರೋಗ್ಯ ಕಾರ್ಯಕ್ರಮಗಳ ಅಡಿಯಲ್ಲಿ ಸೇವೆಗಳ ಕುರಿತ ಮಾಹಿತಿ ಎಲ್ಲವನ್ನೂ ಪಡೆಯಬೇಕು.
- ಸಮಾಲೋಚಕರು ಮತ್ತು ಸ್ನೇಹ ಕೇಂದ್ರದ ಮೂಲಕ ಸಮಾಲೋಚನೆ ಸೇವೆ ನೀಡಬೇಕು. ಕಾರ್ಯಕ್ರಮದ ಮಾರ್ಗಸೂಚಿಗಳ ಪ್ರಕಾರ ಗರ್ಭನಿರೋಧಕ ಸೇವೆಗಳು ಮತ್ತು ಗರ್ಭಧಾರಣೆಯ ಪರೀಕ್ಷಾ ಕಿಟ್ ಒದಗಿಸಬೇಕು ಶಾಲೆ ಬಿಟ್ಟವರು, ವಲಸಿಗರು ಮತ್ತು ಸಾಮಾಜಿಕವಾಗಿ ದುರ್ಬಲ ಕುಟುಂಬಗಳು ಸೇರಿ ಬಾಲಕಿಯರ ಗುರುತಿಸುವಿಕೆ ಮತ್ತು ಮ್ಯಾಪಿಂಗ್ ಮಾಡಬೇಕು. ಈ ಎಲ್ಲಾ ಲೆಕ್ಕ ಪರಿಶೋಧನೆ ಕುರಿತು ಡಿಎಚ್ ಒ ಹಾಗೂ ರಾಜ್ಯ ಮಟ್ಟದಲ್ಲಿ ಉಪ ನಿರ್ದೇಶಕರು ಮೇಲ್ವಿಚಾರಣೆ ವಹಿಸಬೇಕು ಗೌಪ್ಯತೆ ಕಾಪಾಡುವುದು ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ❖ ಕಾಳಿ ಹುಲಿ ಅಭಯಾರಣ್ಯ: 663 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶ

**ಸಂದರ್ಭ: ಉತ್ತರ ಕನ್ನಡ ಜಿಲ್ಲೆಯ ಕಾಳಿ ಹುಲಿ ಸಂರಕ್ಷಿತ ಪ್ರದೇಶದ 663 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯ ಮಂಗಳವಾರ ಕರಡು ಅಧಿಸೂಚನೆ ಹೊರಡಿಸಿದೆ.**

- ಅರಣ್ಯದ ಅಂಚಿನಿಂದ 10ಕಿ.ಮೀ. ವರೆಗಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲಾಗಿದೆ ಭೀಮಗಡ ವನ್ಯಜೀವಿಧಾಮವು ಪಕ್ಕದಲ್ಲಿ ಇರುವುದರಿಂದ ಉತ್ತರ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಪರಿಸರ ಸೂಕ್ಷ್ಮ ಪ್ರದೇಶವನ್ನು ಗುರುತಿಸಿಲ್ಲ ಈಶಾನ್ಯದಲ್ಲಿ 5 ಕಿ ಮೀ.ಯಿಂದ 10 ಕಿ.ಮೀ. ಪೂರ್ವದಲ್ಲಿ 1ಕಿ.ಮೀ.ಯಿಂದ 7ಕಿ.ಮೀ. ವರೆಗೆ ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಲಾಗಿದೆ.
- ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ 75 ಚ.ಕಿ.ಮೀ. ಕಂದಾಯ ಪ್ರದೇಶ, 84 ಚ.ಕಿ.ಮೀ ಕಂದಾಯ ಗ್ರಾಮಗಳು ಹಾಗೂ 503 ಚ.ಕಿ.ಮೀ. ಅರಣ್ಯ ಸೇರಿವೆ. ಆಕ್ಷೇಪಣೆ ಸಲ್ಲಿಕೆಗೆ 60 ದಿನಗಳ ಕಾಲಾವಕಾಶ ನೀಡಲಾಗಿದೆ.
- ಅಂತಿಮ ಅಧಿಸೂಚನೆ ಪ್ರಕಟಗೊಂಡ ಬಳಿಕ ಎರಡು ವರ್ಷಗಳಲ್ಲಿ ರಾಜ್ಯ ಸರ್ಕಾರವು ವಲಯ ಮಾಸ್ಟರ್ ಪ್ಲಾನ್ ಸಿದ್ಧಪಡಿಸಬೇಕು ಸ್ಥಳೀಯ ಜನರೊಂದಿಗೆ ಸಮಾಲೋಚಿಸಿ ಈ ಪ್ರಕ್ರಿಯೆ ನಡೆಸಬೇಕು' ಎಂದು ಸಚಿವಾಲಯ ಸೂಚಿಸಿದೆ.

Dr Rajkumar IAS/KAS Academy



# ದಕ್ಷಿಣದ ಜನಸಂಖ್ಯೆ ಕುಸಿತ: ಸಣ್ಣದಲ್ಲ ಈ ಸವಾಲು

## ಯುವಜನರು, ಹಿರಿಯರು ಎಲ್ಲಿ, ಎಷ್ಟು?



## ವಲಸಿಗರನ್ನು ಆಧರಿಸಿದ ಆರ್ಥಿಕತೆ

### ಫಲವಂತಿಕೆ ದರ ಕುಸಿತ ದಕ್ಷಿಣ ಭಾರತ ಮುಂದು

| ರಾಜ್ಯಗಳು | 2003 | 2008 | 2013 | 2018 | 2023 |
|---|---|---|---|---|---|
| ಆಂಧ್ರ ಪ್ರದೇಶ | 2.2 | 1.8 | 1.8 | 1.6 | 1.5 |
| ಕರ್ನಾಟಕ | 2.3 | 2 | 1.9 | 1.7 | 1.5 |
| ಕೇರಳ | 1.8 | 1.7 | 1.8 | 1.7 | 1.5 |
| ತಮಿಳುನಾಡು | 1.9 | 1.7 | 1.7 | 1.6 | 1.3 |
| ತೆಲಂಗಾಣ | - | - | 1.6 | 1.6 | 1.5 |
| ಬಿಹಾರ | 4.2 | 3.9 | 3.4 | 3.2 | 2.8 |
| ಛತ್ತೀಸಗಢ | - | 3 | 2.6 | 2.4 | 2.2 |
| ಜಾರ್ಖಂಡ್ | - | 3.2 | 2.7 | 2.5 | 2.1 |
| ಮಧ್ಯ ಪ್ರದೇಶ | 3.8 | 3.3 | 2.9 | 2.7 | 2.4 |
| ರಾಜಸ್ಥಾನ | 3.8 | 3.3 | 2.8 | 2.5 | 2.3 |
| ಉತ್ತರ ಪ್ರದೇಶ | 4.4 | 3.8 | 3.1 | 2.9 | 2.6 |
| ಭಾರತ | 3 | 2.6 | 2.3 | 2.2 | 1.9 |

* ಒಟ್ಟು ಫಲವಂತಿಕೆ ದರ (ಟಿಎಫ್‌ಆರ್) ಎಂದರೆ, ಮಹಿಳೆಯೊಬ್ಬರು ತಮ್ಮ ಜೀವಮಾನದಲ್ಲಿ ಪಡೆಯುವ ಮಕ್ಕಳ ಸರಾಸರಿ ಸಂಖ್ಯೆ

## ಫಲವಂತಿಕೆ ಕುಸಿತದ ಪರಿಣಾಮ

ಇನ್ನೊಂದು ಕಡೆ, ದಕ್ಷಿಣದ ರಾಜ್ಯಗಳಲ್ಲಿ ಕಡಿಮೆಯಾಗುತ್ತಿರುವ ಜನನ ಪ್ರಮಾಣವು ಈ ಪ್ರದೇಶದ ಕಾರ್ಮಿಕರ ಚಿತ್ರಣಕ್ಕೆ ಹೊಸ ರೂಪ ನೀಡುತ್ತಿದೆ. ಬಿಹಾರ, ಉತ್ತರ ಪ್ರದೇಶ, ಜಾರ್ಖಂಡ್, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶದಿಂದ ವಲಸೆ ಬಂದಿರುವ ಕಾರ್ಮಿಕರು ಕರ್ನಾಟಕ, ಕೇರಳ, ...

## ಹಣಕಾಸಿನ ಒತ್ತಡ

## ಹೆಚ್ಚುತ್ತಿದೆ ಅಸಮಾನತೆ

## ಭಾರತದ ವಲಸೆ ಪ್ರವೃತ್ತಿ

ಕಾರ್ಮಿಕಬಲದಲ್ಲಿ ವಲಸಿಗ ಕಾರ್ಮಿಕರ ಪ್ರಮಾಣ

| | |
|---|---|
| ದೆಹಲಿ | 60% |
| ಮಹಾರಾಷ್ಟ್ರ | 50% |
| ಗುಜರಾತ್ | 45% |
| ಕರ್ನಾಟಕ | 40% |
| ತಮಿಳುನಾಡು | 35% |
| ಕೇರಳ | 30% |
| ಗೋವಾ | 25% |
| ತೆಲಂಗಾಣ | 20% |
| ಉತ್ತರ ಪ್ರದೇಶ | 8% |
| ಮಧ್ಯಪ್ರದೇಶ | 8% |
| ಛತ್ತೀಸಗಢ | 7% |
| ಜಾರ್ಖಂಡ್ | 6% |
| ಬಿಹಾರ | 1% |

30% ದೇಶದ ಸರಾಸರಿ

## ವಿದೇಶದ ಹಣ: ದಕ್ಷಿಣದ ಪಾಲು ಹೆಚ್ಚು

## ಪದಬಂಧ 6367

## ಸುಡೊಕು 6750

- **ಎಂಎಸ್‌ಎಂಇ ಉದ್ಯಮ ಗುರಿಯಾಗಿಸಿ ಯೋಜನೆ ರೂಪಿಸಲು ಕೇಂದ್ರ ಒಲವು: ಉದ್ದಿಮೆಗಳಿಗೆ ಸಾಲ ಖಾತರಿ ಯೋಜನೆ?**

**ಸಂದರ್ಭ: ಉದ್ಯಮ ವಲಯಕ್ಕೆ ನೆರವು ಒದಗಿಸುವ ಉದ್ದೇಶದಿಂದ ₹2.5 ಲಕ್ಷ ಕೋಟಿ ಮೊತ್ತದ ಸಾಲ ಖಾತರಿ ಯೋಜನೆ ರೂಪಿಸಲು ಕೇಂದ್ರ ಸರ್ಕಾರ ಆಲೋಚಿಸುತ್ತಿದೆ ಎಂದು ಮೂಲಗಳು ಹೇಳಿವೆ.**

- ಅದರಲ್ಲೂ ಮುಖ್ಯವಾಗಿ ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ತೊಂದರೆಗೆ ಒಳಗಾಗಿರುವ ಎಂಎಸ್‌ಎಂಇ (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ) ಉದ್ಯಮಗಳಿಗೆ ನೆರವು ನೀಡಲು ಈ ಯೋಜನೆ ಜಾರಿಗೆ ತರುವ ಚಿಂತನೆ ನಡೆದಿದೆ.

- ಈ ಯೋಜನೆಯ ಅಡಿಯಲ್ಲಿ, ಅಮೆರಿಕ-ಇರಾನ್ ನಡುವಿನ ಸಂಘರ್ಷದ ಪರಿಣಾಮವಾಗಿ ಉದ್ಯಮಗಳು ಸಾಲ ಮರುಪಾವತಿಯಲ್ಲಿ ವಿಫಲವಾದಲ್ಲಿ ಸಾಲದ ಶೇಕಡ 90ರಷ್ಟು ಮೊತ್ತದವರೆಗಿನ ಅಥವಾ ಗರಿಷ್ಠ ₹100 ಕೋಟಿವರೆಗಿನ ಮೊತ್ತಕ್ಕೆ ಕೇಂದ್ರ ಸರ್ಕಾರವು ಖಾತರಿ ಒದಗಿಸಲಿದೆ.
- ಕೇಂದ್ರ ಸರ್ಕಾರದ ಪೂರ್ಣ ಮಾಲೀಕತ್ವದ 'ರಾಷ್ಟ್ರೀಯ ಸಾಲ ಖಾತರಿ ಟ್ರಸ್ಟಿ ಕಂಪನಿ'ಯು (ಎನ್‌ಸಿಜಿಟಿಸಿ) ಬ್ಯಾಂಕ್ ಸಾಲಗಳಿಗೆ ಈ ಬಗೆಯ ಖಾತರಿಯನ್ನು ಒದಗಿಸಲಿದೆ. ಯೋಜನೆಗಾಗಿ ಕೇಂದ್ರ ಸರ್ಕಾರವು ಗರಿಷ್ಠ ₹18 ಸಾವಿರ ಕೋಟಿವರೆಗೆ ಹಣ ಒದಗಿಸಬೇಕಾಗುತ್ತದೆ.
- ಈ ಯೋಜನೆಯು ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ಬಹಳ ದೊಡ್ಡ ಯಶಸ್ಸು ಸಾಧಿಸಿತ್ತು. ಇದು ವಿವಿಧ ವಲಯಗಳ ಹಲವು ಉದ್ದಿಮೆಗಳು ತಮ್ಮ ಸಾಲ ತೀರಿಸಲು ನೆರವಾಯಿತು ಎಂದು ಮೂಲಗಳು ವಿವರಿಸಿವೆ.
- ಕೋವಿಡ್-19 ಸಾಂಕ್ರಾಮಿಕದಿಂದಾಗಿ ತೊಂದರೆಗೆ ಒಳಗಾದ ಉದ್ದಿಮೆಗಳಿಗೆ ಪುನಃ ವಹಿವಾಟು ಆರಂಭಿಸಲು ನೆರವಾಗುವ ಉದ್ದೇಶದೊಂದಿಗೆ ಕೇಂದ್ರ ಸರ್ಕಾರವು 2020ರ ಮೇ ತಿಂಗಳಲ್ಲಿ 'ತುರ್ತು ಸಾಲ ಖಾತರಿ ಯೋಜನೆ' (ಇಸಿಎಲ್‌ಜಿಎಸ್) ಆರಂಭಿಸಿತು. ಎಂಎಸ್‌ಎಂಇ ವಲಯದ ಅರ್ಹ ಉದ್ದಿಮೆಗಳಿಗೆ ಇದು ನೆರವು ಒದಗಿಸಿತು.
- ಈ ಯೋಜನೆಯು ಅರ್ಥವ್ಯವಸ್ಥೆಯ ಬಹುತೇಕ ಎಲ್ಲ ವಲಯಗಳಿಗೆ ಅನ್ವಯಆಗುವಂತಿತ್ತು ಯೋಜನೆಯ ಅಡಿಯಲ್ಲಿ ಅರ್ಹ ಉದ್ಯಮಗಳಿಗೆ ನೀಡಿದ ಸಾಲಕ್ಕೆ ಶೇ 100ರಷ್ಟು ಖಾತರಿ ಒದಗಿಸಲಾಗಿತ್ತು.
- ಯೋಜನೆಯ ಅಡಿಯಲ್ಲಿ ನೀಡುವ ಸಾಲದ ಬಡ್ಡಿಗೆ ಮಿತಿ ನಿಗದಿ ಮಾಡಲಾಗಿತ್ತು. ಅಲ್ಲದೆ ಸಾಲದ ವೆಚ್ಚವನ್ನು ತಗ್ಗಿಸುವ ಉದ್ದೇಶದಿಂದ ಪ್ರಕ್ರಿಯಾ ಶುಲ್ಕಗಳನ್ನು ಮನ್ನಾ ಮಾಡಲಾಗಿತ್ತು, ಅವಧಿಗೆ ಮೊದಲೇ ಸಾಲ ಮರುಪಾವತಿ ಮಾಡಿದಲ್ಲಿ ಅದಕ್ಕೆ ಶುಲ್ಕ ವಿಧಿಸುತ್ತಿರಲಿಲ್ಲ. ಈ ಯೋಜನೆಯು 2023ರ ಮಾರ್ಚ್ 31ರವರೆಗೆ ಚಾಲ್ತಿಯಲ್ಲಿತ್ತು.
- ಅಮೆರಿಕ ಮತ್ತು ಇಸ್ರೇಲ್ ಜೊತೆಯಾಗಿ ಇರಾನ್ ವಿರುದ್ಧ ಸಮರ ಆರಂಭಿಸಿದ ನಂತರದಲ್ಲಿ ಕಚ್ಚಾ ತೈಲದ ಬೆಲೆಯು ಸರಿಸುಮಾರು ಶೇ 50ರಷ್ಟು ಜಾಸ್ತಿಯಾಗಿದೆ ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆಗೆ ಅಡಚಣೆ ಉಂಟಾಗಿದೆ.

ದಕ್ಷಿಣ ಧ್ರುವದಲ್ಲಿ ಮಾನವ ಹೆಜ್ಜೆ ಇಡುವ ಪ್ರಯತ್ನಕ್ಕೆ ಮುನ್ನುಡಿ


## ಚಂದ್ರನ ಪರಿಭ್ರಮಣ ನಡೆಸಿದ 'ಆರ್ಟೆಮಿಸ್–2'

ಹೂಸ್ಟನ್ (ಎಪಿ): ನಾಸಾದ ಮಹತ್ವಾಕಾಂಕ್ಷೆಯ 'ಆರ್ಟೆಮಿಸ್-2'ನ ಓರಿಯೋನ್ ಕೋಶವು ಸೋಮವಾರ ರಾತ್ರಿ ಚಂದ್ರನ ಸುತ್ತ ಐತಿಹಾಸಿಕ ಪರಿಭ್ರಮಣ ನಡೆಸಿದೆ.

ನಾಲ್ವರು ಗಗನಯಾನಿಗಳಿದ್ದ ಅಮೆರಿಕದ ಓರಿಯೊನ್ ಕೋಶವು ಚಂದ್ರನ ಸುತ್ತ ಏಳು ಗಂಟೆ ಪರಿಭ್ರಮಣ ಮಾಡಿದ ವೇಳೆ ಭೂಮಿಗೆ ಗೋಚರಿಸದ, ಚಂದ್ರನ ಇನ್ನೊಂದು ಬದಿಯ ಈ ಹಿಂದೆ ಕಂಡಿರದ ಹಲವು ಚಿತ್ರಗಳನ್ನು ಸೆರೆಹಿಡಿದು ನಾಸಾಗೆ ಕಳುಹಿಸುತ್ತಿದೆ.

ಐದು ದಶಕಗಳ ಬಳಿಕ ಚಂದ್ರನ ಕಕ್ಷೆಗೆ ನಾಸಾ, ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಗಗನಯಾನಿಗಳನ್ನು ಕಳುಹಿಸಿತ್ತು. ಈ ಪರಿಭ್ರಮಣವು 'ಅಪೋಲೊ ಯುಗ'ದ ನಂತರ ಚಂದ್ರನಲ್ಲಿ ನಾಸಾದ ಮೊದಲ ಪಯಣವಾಗಿದೆ. ಮುಂದಿನ 2 ವರ್ಷಗಳಲ್ಲಿ ದಕ್ಷಿಣ ಧ್ರುವದಲ್ಲಿ ಮಾನವ ಹೆಜ್ಜೆ ಇಡುವ ಪ್ರಯತ್ನಕ್ಕೆ ಇದು ಮುನ್ನುಡಿ ಬರೆದಿದೆ.

1972ರಲ್ಲಿ 'ಅಪೋಲೊ-13' ತಂಡವು ಚಂದ್ರನಲ್ಲಿಗೆ ಪಯಣಿಸಿತ್ತು. 2,48,655



ನಾಸಾ ಬಿಡುಗಡೆ ಮಾಡಿರುವ ಆರ್ಟೆಮಸ್–2 ಸೆರೆ ಹಿಡಿದಿರುವ ಭೂಮಿ ಮತ್ತು ಚಂದ್ರನ ದೃಶ್ಯ ಎಎಫ್‌ಪಿ ಚಿತ್ರ

ಮೈಲಿ( 4,00,171 ಕಿಲೋಮೀಟರ್) ದೂರ ಕ್ರಮಿಸಿದ್ದ ಅಪೋಲೊದ ದಾಖಲೆಯನ್ನು 'ಆರ್ಟೆಮಿಸ್-2' ಮೀರಿದೆ.

'ಚಂದ್ರನನ್ನು ಈಗ ಬರಿಗಣ್ಣಿನಲ್ಲಿ ನೋಡಬಹುದು ಎಂದು ನನ್ನ ಮನಸ್ಸಿಗೆ ಅನ್ನಿಸಿತು. ಇದು ನಂಬಲಸಾಧ್ಯವಾದುದು. ಈ ಪೀಳಿಗೆ ಮತ್ತು ಮುಂದಿನ ಪೀಳಿಗೆ ಈ ದಾಖಲೆಯನ್ನು ಬೇಗ ಮುರಿಯಬೇಕು'





ಆರ್ಟೆಮಸ್–2 ಗಗಯಾನಿಗಳು

ಎಂದು ಕೆನಡಾದ ಗಗನಯಾನಿ ಜೆರೆಮಿ ಹ್ಯಾನ್ಸನ್ ಅವರು ರೇಡಿಯೊ ಸಂದೇಶ ರವಾನಿಸಿದ್ದಾರೆ.

'ಅಪೋಲೊ 13'ರ ದಾಖಲೆಯನ್ನು ಅಳಿಸಿಹಾಕಿದ ನಂತರ ಈ ಗಗನಯಾನಿಗಳು ಈಗಾಗಲೇ ಗುರ್ತಿಸಿರುವ ಚಂದ್ರನ ಎರಡು ಹೊಸ ಕುಳಿಗಳಿಗೆ ಹೆಸರು ಇಡಲು ಅನುಮತಿ ಕೋರಿದರು. ತಾವು ತೆರಳಿದ್ದ ಕೋಶದ ಹೆಸರು ಮತ್ತು 2020ರಲ್ಲಿ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದ ಕಮಾಂಡರ್ ರೀಡ್ ವೈಸ್‌ಮನ್ ಅವರ ಪತ್ನಿಯ ಹೆಸರನ್ನು ನಾಮಕರಣ ಮಾಡುವುದಾಗಿ ಹೇಳಿದರು.

ಈ ಮನವಿಯಿಂದ ವೈಸ್‌ಮನ್ ಅವರ ಕಣ್ಣಾಲಿಗಳಲ್ಲಿ ನೀರು ತುಂಬಿ ಬಂದವು. ನಾಲ್ವರೂ ಗಗನಯಾನಿಗಳು ಭಾವುಕರಾದರು. ಇಡೀ ದೃಶ್ಯವನ್ನು ಚಿತ್ರಗಳ ರೂಪದಲ್ಲಿ ರೇಡಿಯೊದಲ್ಲಿ ಪ್ರಸಾರ ಮಾಡಲಾಯಿತು.

ಚಂದ್ರ ಮತ್ತು ಭೂಮಿಯನ್ನು ಒಂದೇ ಬಾರಿಗೆ ಸೆರೆಹಿಡಿದಿರುವುದಾಗಿ ಗಗನಯಾನಿಗಳು ಹೂಸ್ಟನ್‌ನಲ್ಲಿರುವ ವಿಜ್ಞಾನಿಗಳಿಗೆ ವಿವರಣೆ ನೀಡಿದರು.

'ಕೆಲವು ಶಿಖರಗಳು ಹೊಳೆಯುತ್ತಿದ್ದವು. ಹಿಮದಿಂದ ಆವೃತ್ತವಾಗಿದ್ದರೂ ಅವು ಗೋಚರಿಸಿದವು' ಎಂದು ಪೈಲಟ್ ವಿಕ್ಟರ್ ಗ್ಲೋವರ್ ಅವರು ಹೇಳಿದರು.

ನಿಕಾನ್ ಕ್ಯಾಮೆರಾದ ಮೂಲಕ ಚಿತ್ರ ಸೆರೆಹಿಡಿಯಲಾಗಿದೆ. ಕೆಲವು ಚಿತ್ರಗಳನ್ನು ಸೆರೆಹಿಡಿಯಲು ಗಗನಯಾನಿಗಳು ತಮ್ಮ ಐಫೋನ್‌ಗಳನ್ನೂ ಬಳಸಿದರು.

ಅಮೆರಿಕದ ರೀಡ್ ವೈಸ್‌ಮನ್, ವಿಕ್ಟರ್ ಗ್ಲೋವೆರ್, ಕ್ರಿಸ್ಟಿನಾ ಕೋಚ್ ಹಾಗೂ ಕೆನಡಾದ ಜೆರೆಮಿ ಹ್ಯಾನ್ಸನ್ ತಂಡದಲ್ಲಿದ್ದರು. 54 ವರ್ಷಗಳ ಬಳಿಕ ಚಂದ್ರನನ್ನು ಮನುಷ್ಯ ಮತ್ತೊಮ್ಮೆ ಹತ್ತಿರದಿಂದ ನೋಡಿದ ದಾಖಲೆಯನ್ನು ಈ ತಂಡ ಬರೆದಿದೆ.

## ❖ ಪಲಕ್-ಮುಕೇಶ್ ವಿಶ್ವದಾಖಲೆ

**ಸಂದರ್ಭ: ಭಾರತದ ಶೂಟರ್‌ಗಳಾದ ಪಲಕ್ ಮತ್ತು ಮುಕೇಶ್ ನೆಲವಲ್ಲಿ ಜೋಡಿ, ಐಎಸ್‌ಎಸ್‌ಎಫ್ ವಿಶ್ವ ಕಪ್ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡಿತು. ಆ ಹಾದಿಯಲ್ಲಿ ವಿಶ್ವ ದಾಖಲೆಯನ್ನೂ ಬರೆಯಿತು.**

- ಭಾರತದ ಜೋಡಿ ಫೈನಲ್‌ನಲ್ಲಿ 487.7 ಸ್ಕೋರ್ ಗಳಿಸಿತು. ಇದು ಜೂನಿಯರ್ ವಿಶ್ವ ದಾಖಲೆ ಕೂಡ. ಅರ್ಹತಾ ಸುತ್ತಿನಲ್ಲೇ ಉತ್ತಮ ಗುರಿ ಪ್ರದರ್ಶಿಸಿ 581 ಅಂಕ ದಾಖಲಿಸಿತ್ತು.
- ಚೀನಾದ ಕ್ರಿಯಾನ್‌ಮನ್ ಯಾವೊ ಮತ್ತು ಕಯ್ ಹು ಜೋಡಿ 484.8 ಸ್ಕೋರ್‌ನೊಡನೆ ಬೆಳ್ಳಿ ಗೆದ್ದಿತು. ಹಂಗೇರಿಯ ವೆರೋನಿಕಾ ಮೇಜರ್ ಮತ್ತು ಅಕೋಸ್ ಕರೋಲಿ ಜೋಡಿ (414.9) ಕಂಚಿನ ಪದಕ ಗಳಿಸಿತು.
- ಭಾರತದ ಪರ ಫೈನಲ್‌ನಲ್ಲಿ ಪಲಕ್ 243 ಮತ್ತು ಮುಕೇಶ್ 244 7 ಸ್ಕೋರ್ ದಾಖಲಿಸಿದರು. ಕ್ಯಾಲಿಫಿಕೇಷನ್ ಸುತ್ತಿನಲ್ಲಿ ಭಾರತದ ಜೋಡಿ ಎರಡನೇ ಸ್ಥಾನದಲ್ಲಿತ್ತು.
- 18 ವರ್ಷ ವಯಸ್ಸಿನ ಪಲಕ್, 2023ರ ಏಷ್ಯನ್ ಕ್ರೀಡೆಗಳ 10 ಮೀ ಏರ್ ಪಿಸ್ತೂಲ್ ವೈಯಕ್ತಿಕ ಚಿನ್ನ ಮತ್ತು ತಂಡ ವಿಭಾಗದಲ್ಲಿ ಬೆಳ್ಳಿ ಗೆಲ್ಲುವ ಮೂಲಕ ಪ್ರವರ್ಧಮಾನಕ್ಕೆ ಬಂದಿದ್ದರು.



ಪಲಕ್ (ಎಡ) ಹಾಗೂ ಮುಕೇಶ್

**ಪಲಕ್-ಮುಕೇಶ್ ವಿಶ್ವದಾಖಲೆ**


## ❖ ಕಾನೂನಾತ್ಮಕ ಪರಾಮರ್ಶೆ ನಡೆಸಲಾಗದು- ಸುಪ್ರೀಂಕೋರ್ಟ್‌ಗೆ ಮಾಹಿತಿ: 'ಶಬರಿಮಲೆ: ಸ್ತ್ರೀಯರ ನಿರ್ಬಂಧ-ಕೇಂದ್ರದ ಬೆಂಬಲ'

**ಸಂದರ್ಭ: 'ಧಾರ್ಮಿಕ ನಂಬಿಕೆಯಿಂದಾಗಿ ಶಬರಿಮಲೆ ದೇಗುಲಕ್ಕೆ ಅಲ್ಲಿನ ಸರ್ಕಾರ ಮಹಿಳೆಯರಿಗೆ ಪ್ರವೇಶ ನೀಡುತ್ತಿಲ್ಲ. ಇಂತಹ ವಿಷಯಗಳು ನ್ಯಾಯಾಂಗ ಪರಿಶೀಲನೆಯ ವ್ಯಾಪ್ತಿಯನ್ನು ಮೀರಿವೆ' ಎಂದು ಸುಪ್ರೀಂ ಕೋರ್ಟ್ ಎದುರು ಕೇಂದ್ರ ಸರ್ಕಾರ ಹೇಳಿದೆ.**

- ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ 9 ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ಪೀಠದ ಮುಂದೆ ಕೇಂದ್ರ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಒಂದೊಮ್ಮೆ ಅವೈಜ್ಞಾನಿಕ ಎಂದು ಕಂಡುಬಂದರೆ, ಇದಕ್ಕೆ ಶಾಸಕಾಂಗದಲ್ಲಿ ಪರಿಹಾರವಿದೆ' ಎಂದು ತಿಳಿಸಿದ್ದಾರೆ.
- 'ನಾವು ಪ್ರತಿಯೊಂದು ಪಂಗಡದ ಆಚರಣೆಯನ್ನೂ ಗೌರವಿಸಬೇಕು. ಎಲ್ಲವೂ ಘನತೆ ಹಾಗೂ ದೈಹಿಕ ಸಾಮ ರ್ಥ್ಯಕ್ಕೆ ಸಂಬಂಧಿಸಿದ್ದಲ್ಲ. ನಾನು ಮಜಾರ್ ಅಥವಾ ಗುರುದ್ವಾರಕ್ಕೆ ತೆರಳಿದರೆ, ತಲೆಗೆ ಬಟ್ಟೆ ಕಟ್ಟಿಕೊಳ್ಳಬೇಕು. ಅದನ್ನು ಘನತೆ, ಹಕ್ಕು ಅಥವಾ ಆಯ್ಕೆ ಎಂದು ಹೇಳು ವಂತಿಲ್ಲ' ಎಂದು, ಮೆಹ್ತಾ ಅವರು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಎಂ.ಎಂ.ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಆಗಸ್ಟೀನ್ ಜಾರ್ಜ್, ಪ್ರಸನ್ನ ವಿ.ವರಾಳೆ, ಆರ್. ಮಹದೇವನ್, ಜಾಯಾಮಾಲ್ಯಾ ಬಾಗ್ಚಿ ಪೀಠದ ಮುಂದೆ ತಿಳಿಸಿದರು.
- 'ಯಾರಾದರೂ ಧಾರ್ಮಿಕ ಆಚರಣೆಯ ಹೆಸರಿನಲ್ಲಿ ಮಾನವನ ಬಲಿದಾನ ಅಗತ್ಯ ಎಂದು ಪ್ರತಿಪಾದಿಸಿದರೆ, ಆಗ ಅವರು ಸಂವಿಧಾನದ 32ರ ಅಡಿಯಲ್ಲಿ ನ್ಯಾಯಾ ಲಯದಲ್ಲಿ ಪ್ರಶ್ನಿಸಬಹುದಾಗಿದೆ. ಆಗ ನ್ಯಾಯಾಲಯವು ಧಾರ್ಮಿಕವಾಗಿ ಅದು ಅಗತ್ಯವೇ ಎಂದು ಪ್ರಶ್ನಿಸಬೇಕಿಲ್ಲ.ಜನರ ಆರೋಗ್ಯ, ಸಾರ್ವಜನಿಕ ಸುರಕ್ಷತೆ ಆಧರಿಸಿ ನೇರವಾಗಿ ತಿರಸ್ಕರಿಸಬಹುದಾಗಿದೆ' ಗಮನಸೆಳೆದಿದ್ದಾರೆ.

# ಕುಸ್ತಿ: ಲಲಿತ್‌ಗೆ ಬೆಳ್ಳಿ, ಸುನಿಲ್‌ಗೆ ಕಂಚು

ಬಿಷ್ಕೆಕ್ (ಕಿರ್ಗಿಸ್ತಾನ), (ಪಿಟಿಐ): ಅನುಭವಿ ಪೈಲ್ವಾನ್ ಲಲಿತ್ ಅವರು ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 55 ಕೆ.ಜಿ. ವಿಭಾಗದ ಗ್ರೀಕೊ ರೋಮನ್ ಸ್ಪರ್ಧೆಯಲ್ಲಿ ಮಂಗಳವಾರ ಬೆಳ್ಳಿ ಪದಕ ಗೆದ್ದರು. ಇದು ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಮೊದಲ ಪದಕ ಎನಿಸಿತು.



ನಿತೇಶ್



ಲಲಿತ್

ಭಾರತದ ನಿತೇಶ್ 97 ಕೆ.ಜಿ. ವಿಭಾಗದಲ್ಲಿ ಪ್ರಶಸ್ತಿ ಸುತ್ತನ್ನು ಪ್ರವೇಶಿಸಿದರು.

23 ವರ್ಷದೊಳಗಿನವರ ಮಾಜಿ ಏಷ್ಯನ್ ಕಂಚಿನ ಪದಕ ವಿಜೇತರಾದ ಲಲಿತ್ ಸೆಮಿಫೈನಲ್‌ನಲ್ಲಿ ಚೀನಾದ ಹುವೊಯಿಂಗ್ ಶಿ ಅವರನ್ನು ಸೋಲಿಸಿದ್ದರು. ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಇಕ್ತಿಯಾರ್ ಬೊಟಿರೋವ್ ಎದುರು ಪ್ರತಿರೋಧ ತೋರಿದರೂ 0–9 ರಿಂದ ಸೋತರು.

87 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕೆ ನಡೆದ ಹಣಾಹಣಿಯಲ್ಲಿ ಮಾಜಿ ಚಾಂಪಿಯನ್ ಸುನಿಲ್ ಕುಮಾರ್ ಅವರು ಮೊದಲ ಸುತ್ತಿನಲ್ಲಿ 0–4 ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿ ಉಜ್ಬೇಕಿಸ್ತಾನದ ಮುಖಮದ್ ಕೊದಿರ್ ರಸುಲೋವ್ ಅವರನ್ನು 5–4 ರಿಂದ ಸೋಲಿಸಿದರು. ಇದು ಅವರಿಗೆ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡನೇ ಕಂಚು ಎನಿಸಿತು.

ಇದಕ್ಕೆ ಮೊದಲು, 23 ವರ್ಷ ವಯಸ್ಸಿನ ನಿತೇಶ್ 97 ಕೆ.ಜಿ. ಗ್ರೀಕೊ ರೋಮನ್ ಕೆಟಗರಿಯಲ್ಲಿ ಫೈನಲ್ ತಲುಪಿದರು. ಕಳೆದ ವರ್ಷ ಕಂಚಿನ ಪದಕ ಗೆದ್ದುಕೊಂಡಿದ್ದ ಅವರು ಈ ಬಾರಿ ಸುಧಾರಿತ ಫಲಿತಾಂಶ ಕಾಣುವುದು ಖಚಿತವಾಯಿತು. ನಿತೀಶ್ ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಮೊಹಮ್ಮದ್‌ಹದಿ ಸರವಿ (ಇರಾನ್) ಅವರನ್ನು ಸೋಲಿಸಿದರು.

82 ಕೆ.ಜಿ. ಗ್ರೀಕೊ ರೋಮನ್ ಸ್ಪರ್ಧೆಯಲ್ಲಿ ಪ್ರಿನ್ಸ್ ಅವರು ಕಂಚಿನ ಪದಕಕ್ಕಾಗಿ ನಡೆಯುವ ಸೆಣಸಾಟದಲ್ಲಿ ತುರ್ಕಮೆನಿಸ್ತಾನದ ದಿದಾರ್ ಅಮ್ಮಾನಝುರೋವ್ ಅವರನ್ನು ಎದುರಿಸಲಿದ್ದಾರೆ. 20 ವರ್ಷ ವಯಸ್ಸಿನ ಪ್ರಿನ್ಸ್ ಸೆಮಿಫೈನಲ್‌ನಲ್ಲಿ ಇರಾನ್‌ನ ಮೊಹಮ್ಮದಮಿನ್ ಹುಸೇನಿ ಅವರಿಗೆ ಮಣಿದಿದ್ದರು.

**ಅಮನ್‌ಗೆ ಹಿನ್ನಡೆ:** ಆದರೆ ಭಾರತದ ಪ್ರಮುಖ ಸ್ಪರ್ಧಿ ಅಮನ್ ಅವರಿಗೆ ಒಂದು ಪಾಯಿಂಟ್ ಅಂತರದಿಂದ ಹಿನ್ನಡೆಯಾಯಿತು. 77 ಕೆ.ಜಿ. ಗ್ರೀಕೊ ರೋಮನ್ ಕೆಟಗರಿಯಲ್ಲಿ ಕಂಚಿನ ಪದಕಕ್ಕೆ ನಡೆದ ಸೆಣಸಾಟದಲ್ಲಿ ಅವರು ದಕ್ಷಿಣ ಕೊರಿಯಾದ ಯೊನ್ಗಮ್ ನ್ಹೊ ಅವರಿಗೆ 14–15ರಲ್ಲಿ ಸೋತರು.

ಸಚಿನ್ ಸಹ್ರಾವತ್ (67 ಕೆ.ಜಿ. ಗ್ರೀಕೊ ರೋಮನ್) ಅವರು ಕಂಚಿನ ಪದಕಕ್ಕೆ ಸೆಣಸುವ ಅರ್ಹತೆ ಪಡೆದರು. ಅವರು ಬುಧವಾರ ರೆಪೆಷಾಜ್ ಸುತ್ತಿನಲ್ಲಿ ಚೀನಾದ ಜಿ ಪೆಂಗ್ ವಿರುದ್ಧ ಅಖಾಡಕ್ಕಿಳಿಯಲಿದ್ದಾರೆ.

Publication Date
08/04/2026

Presented by ಪ್ರಜಾವಾಣಿ



## ❖ ಕದನ ವಿರಾಮ: ತಾತ್ಕಾಲಿಕ ಸಮಾಧಾನ: ಪಾಕ್ ಮಧ್ಯಸ್ಥಿಕೆಯಲ್ಲಿ ಅಮೆರಿಕ-ಇಸ್ರೇಲ್, ಇರಾನ್ ಸಮ್ಮತಿ

**ಸಂದರ್ಭ: ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಎರಡು ವಾರಗಳ ತಾತ್ಕಾಲಿಕ ಕದನ ವಿರಾಮಕ್ಕೆ ಬುಧವಾರ ಸಮ್ಮತಿಸಿವೆ. ಇದರೊಂದಿಗೆ ಕಳೆದ 40 ದಿನಗಳಿಂದ ನಡೆಯುತ್ತಿರುವ ಯುದ್ಧದಿಂದ ನಲುಗಿದ್ದ ಪಶ್ಚಿಮ ಏಷ್ಯಾ ಸೇರಿ ವಿಶ್ವವೇ ಸದ್ಯದ ಮಟ್ಟಿಗೆ ನಿಟ್ಟುಸಿರು ಬಿಡುವಂತಾಗಿದೆ.**



**ಅಮೆರಿಕದ ನಿಲುವೇನು?**

- ಅಣ್ವಸ್ತ್ರ ತಯಾರಿಕೆಗೆ ಬೇಕಾದ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಇರಾನ್ ತಾನಾಗಿಯೇ ಅಮೆರಿಕಕ್ಕೆ ಒಪ್ಪಿಸಬೇಕು. ಶುದ್ಧಗೊಳಿಸಿದ ಯುರೇನಿಯಂ ಅನ್ನು ಒಪ್ಪಿಸದಿದ್ದಲ್ಲಿ ಇರಾನ್‌ನ ಪರಮಾಣು ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗುವುದು
- ಕದನ ವಿರಾಮವು ತಾತ್ಕಾಲಿಕ ತಡೆಯಷ್ಟೆ. ದಾಳಿ ನಡೆಸಲು ಅಮೆರಿಕ ಪಡೆಗಳು ಸದಾ ಸನ್ನದ್ಧವಾಗಿವೆ. ಅಗತ್ಯ ಎನಿಸಿದರೆ ತಕ್ಷಣ ಇರಾನ್ ಮೇಲೆ ದಾಳಿ ಆರಂಭಿಸಲಾಗುವುದು
- ಇರಾನ್ ಪ್ರಕಟಿಸಿರುವ ಕದನ ವಿರಾಮ ಪ್ರಸ್ತಾವವು ಯುದ್ಧ ನಿಲ್ಲಿಸುವುದಕ್ಕೆ ಅಮೆರಿಕ ವಿಧಿಸಿದ್ದ ಷರತ್ತುಗಳಿಗಿಂತ ಭಿನ್ನ. ಮಾಧ್ಯಮಗಳಲ್ಲಿ ಪ್ರಕಟಿಸಿರುವ ದಾಖಲೆಗಳೇ ಕದನ ವಿರಾಮಕ್ಕೆ ಸಂಬಂಧಿಸಿದ ಕಾರ್ಯಕಾರಿ ಚೌಕಟ್ಟು ಅಲ್ಲ

**ಸಂಘರ್ಷಪೀಡಿತ ಪಶ್ಚಿಮ ಏಷ್ಯಾ**



**ಇರಾನ್‌ನ ಪ್ರಸ್ತಾವಗಳು**

1. ಇರಾನ್ ಮೇಲೆ ದಾಳಿ ಮಾಡುವುದಿಲ್ಲ ಎಂಬ ಬಗ್ಗೆ ಅಮೆರಿಕ ತಾತ್ವಿಕವಾಗಿ ಒಪ್ಪಿಗೆ ಸೂಚಿಸಬೇಕು ಹಾಗೂ ಬದ್ಧತೆ ಪ್ರದರ್ಶಿಸಬೇಕು
2. ಹೊರ್ಮುಜ್ ಜಲಸಂಧಿ ಮೇಲೆ ಇರಾನ್ ನಿಯಂತ್ರಣ ಮುಂದುವರಿಯಲಿದೆ
3. ಯುರೇನಿಯಂ ಸಮೃದ್ಧಗೊಳಿಸುವಿಕೆ ಕುರಿತು ಇರಾನ್ ಹೊಂದಿರುವ ಹಕ್ಕನ್ನು ಒಪ್ಪಿಕೊಳ್ಳಬೇಕು
4. ಇರಾನ್ ಜೊತೆಗಿನ ನೇರ ವ್ಯವಹಾರದ ಮೇಲೆ ಅಮೆರಿಕ ವಿಧಿಸಿರುವ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕಬೇಕು
5. ಇರಾನ್ ಜೊತೆಗಿನ ಪರೋಕ್ಷ ವ್ಯವಹಾರದ ಮೇಲೆ ಅಮೆರಿಕ ವಿಧಿಸಿರುವ ಎಲ್ಲ ನಿರ್ಬಂಧಗಳನ್ನು ತೆರವು ಮಾಡಬೇಕು ▶10

ನಾವು ಅಂದುಕೊಂಡಿದ್ದ ಗುರಿಯನ್ನು ಸಾಧಿಸಿದ್ದೇವೆ. ಇರಾನ್ ಮತ್ತು ಪಶ್ಚಿಮ ಏಷ್ಯಾದಲ್ಲಿ ಶಾಶ್ವತವಾಗಿ ಶಾಂತಿ ನೆಲಸಬೇಕು ಎಂಬುದು ನಮ್ಮ ಆಶಯ. ಕದನ ವಿರಾಮಕ್ಕೆ ಅಮೆರಿಕ ಒಪ್ಪಲು ಇದೇ ಮುಖ್ಯ ಕಾರಣ
**ಡೊನಾಲ್ಡ್ ಟ್ರಂಪ್**, ಅಮೆರಿಕ ಅಧ್ಯಕ್ಷ

ಕದನ ವಿರಾಮ ಸ್ವಾಗತಾರ್ಹ. ಇನ್ನು ಮುಂದೆ ಇರಾನ್ ಅಣ್ವಸ್ತ್ರ ಅಥವಾ ಕ್ಷಿಪಣಿ ದಾಳಿಯ ಬೆದರಿಕೆ ಒಡ್ಡುವುದಿಲ್ಲ ಎಂಬುದನ್ನು ಖಾತ್ರಿಪಡಿಸುವ ಅಮೆರಿಕದ ಯತ್ನ ಬೆಂಬಲಿಸುತ್ತೇವೆ
**ಇಸ್ರೇಲ್**

**ಪಾಕಿಸ್ತಾನ ನಿರ್ಣಾಯಕ ಪಾತ್ರ**

- ಅಮೆರಿಕ ಹಾಗೂ ಇರಾನ್ ಕದನ ವಿರಾಮಕ್ಕೆ ಒಪ್ಪಿಗೆ ನೀಡಿದ್ದಾಗಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ 'ಎಕ್ಸ್'ನಲ್ಲಿ ಘೋಷಣೆ
- ಇರಾನ್ ಮತ್ತು ಅಮೆರಿಕ ಪ್ರಸ್ತಾವಗಳ ಉಲ್ಲೇಖ ಮಾಡದ ಶರೀಫ್
- ಕದನ ವಿರಾಮಕ್ಕೆ ಇಸ್ರೇಲ್ ಸಮ್ಮತಿಸಿರುವ ಬಗ್ಗೆಯೂ ಉಲ್ಲೇಖಿಸದ ಪಾಕಿಸ್ತಾನ ಪ್ರಧಾನಿ
- ಮಾತುಕತೆ ನಡೆಸುವುದಕ್ಕಾಗಿ ಇಸ್ಲಾಮಾಬಾದ್‌ನಲ್ಲಿ ಶುಕ್ರವಾರ ಆಯೋಜಿಸಿರುವ ಸಭೆಯಲ್ಲಿ ಪಾಲ್ಗೊಳ್ಳುವಂತೆ ಅಮೆರಿಕ ಹಾಗೂ ಇರಾನ್ ನಿಯೋಗಗಳಿಗೆ ಶರೀಫ್ ಆಹ್ವಾನ

**ಪರಿಣಾಮಗಳು, ನಿರೀಕ್ಷೆಗಳು**

- ಕದನ ವಿರಾಮದ ಹಿನ್ನೆಲೆಯಲ್ಲಿ ಭಾರತಕ್ಕೆ ಇಂಧನ ಪೂರೈಕೆ ಸ್ಥಿತಿ ಸುಧಾರಿಸಬಹುದು ಎಂದು ನಿರೀಕ್ಷಿಸಲಾಗಿದೆ
- ರಸಗೊಬ್ಬರ ಉತ್ಪಾದನಾ ಘಟಕಗಳಿಗೆ ಅನಿಲ ಪೂರೈಕೆಯನ್ನು ಬುಧವಾರದಿಂದ ಅವುಗಳ ಬೇಡಿಕೆಯ ಶೇ 95ರಷ್ಟು ಮಟ್ಟಕ್ಕೆ ಹೆಚ್ಚಿಸಲಾಗಿದೆ
- ಬ್ರೆಂಟ್ ಕಚ್ಚಾ ತೈಲದ ಬೆಲೆಯು ಮಾರುಕಟ್ಟೆಯಲ್ಲಿ ಶೇ 15ರಷ್ಟು ಇಳಿಕೆ ಆಗಿದೆ
- ಹೊರ್ಮುಜ್ ಜಲಸಂಧಿಯ ಮೂಲಕ ಹಡಗು ಸಂಚಾರ ಸುಗಮವಾಗಿ ಆಗುತ್ತದೆ, ಕೊಲ್ಲಿ ರಾಷ್ಟ್ರಗಳಿಗೆ ರಫ್ತು ಚಟುವಟಿಕೆ ಮತ್ತೆ ಸಹಜ ಸ್ಥಿತಿಗೆ ಬರಬಹುದು

**ಮತ್ತೆ ಹೊರ್ಮುಜ್ ಮುಚ್ಚಿದ ಇರಾನ್**

ಟೆಹರಾನ್ (ಎಪಿ): ತಾತ್ಕಾಲಿಕ ಕದನ ವಿರಾಮದ ಬೆನ್ನಲ್ಲೇ, ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ ಪ್ರತಿಯಾಗಿ ಇರಾನ್ ಬುಧವಾರ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದೆ. ಜಲಸಂಧಿಯನ್ನು ತಕ್ಷಣವೇ ಹಡಗುಗಳ ಸಾಗಾಟಕ್ಕೆ ಮುಕ್ತಗೊಳಿಸಬೇಕು ಎಂದು ಅಮೆರಿಕ ಒತ್ತಾಯಿಸಿದೆ.

ಜಲಸಂಧಿಯನ್ನು ಮತ್ತೆ ಮುಚ್ಚಿರುವ ಇರಾನ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ನಡೆಯು, ತಾತ್ಕಾಲಿಕ ಕದನ ವಿರಾಮ ಮುಂದುವರಿಯುತ್ತದೆಯೇ ಎಂಬ ಅನುಮಾನ ಹುಟ್ಟುಹಾಕಿದೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, 'ಈ ಒಪ್ಪಂದವು ಲೆಬನಾನ್ ಅನ್ನು ಒಳಗೊಂಡಿಲ್ಲ' ಎಂದು ಹೇಳಿದ್ದಾರೆ. ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಲೆಬನಾನ್ ಮೇಲೆ ಇಸ್ರೇಲ್ ದಾಳಿ ತೀವ್ರಗೊಳಿಸಿದ್ದು 112 ಜನರು ಮೃತಪಟ್ಟಿದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ. ▶10

- ಈ ತಾತ್ಕಾಲಿಕ ಕದನ ವಿರಾಮಕ್ಕೆ ಸಂಬಂಧಿಸಿ 10 ಅಂಶಗಳನ್ನು ಒಳಗೊಂಡ ಪ್ರಸ್ತಾವ ಮುಂದಿಟ್ಟಿರುವ ಇರಾನ್, ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಶುಕ್ರವಾರ ನಡೆಯಲಿರುವ ಸಭೆಯಲ್ಲಿ ಈ ಕುರಿತು ವಿಸ್ತೃತ ಮಾತುಕತೆ ನಡೆಸುವುದಾಗಿ ಹೇಳಿದೆ.
- 'ಇರಾನ್ ಮುಂದಿಟ್ಟಿರುವ ಷರತ್ತುಗಳು 'ಕಾರ್ಯಸಾಧ್ಯವಾದವುಗಳು' ಎಂದು ಈ ಮೊದಲು ಹೇಳಿದ್ದ ಟ್ರಂಪ್ ಈಗ ತಮ್ಮ ನಿಲುವು ಬದಲಾಯಿಸಿದ್ದಾರೆ. 'ಈ ಅಂಶಗಳ ಕುರಿತು ವಿಸ್ತೃತವಾದ ವಿವರಣೆ ನೀಡದಿದ್ದಲ್ಲಿ ಕದನ ವಿರಾಮ ಕುರಿತ ಇರಾನ್ ಯೋಜನೆಯೇ ವಂಚನೆ ಎನಿಸಲಿದೆ' ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಈ ಕುರಿತು ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರೂಥ್ ಸೋಷಿಯಲ್'ನಲ್ಲಿ ಬರೆದುಕೊಂಡಿದ್ದಾರೆ. ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸಿರುವುದನ್ನು ಖಚಿತಪಡಿಸಿ ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಗ್ಚಿ ನೀಡಿರುವ ಹೇಳಿಕೆಯನ್ನು ಕೂಡ ಟ್ರಂಪ್ ಹಂಚಿಕೊಂಡಿದ್ದಾರೆ.
- ಇರಾನ್ ಕೂಡ ಇದಕ್ಕೆ ಪ್ರತಿಕ್ರಿಯಿಸಿದೆ. 'ಅಮೆರಿಕ ಮುಂದಿಟ್ಟಿರುವ ಎರಡು ವಾರಗಳ ಕದನ ವಿರಾಮ ಪ್ರಸ್ತಾವವನ್ನು ಒಪ್ಪಿಕೊಂಡಿದ್ದೇವೆ. ಇಸ್ಲಾಮಾಬಾದ್‌ನಲ್ಲಿ ನಡೆಯುವ ಸಭೆಯಲ್ಲಿ ಅಮೆರಿಕದೊಂದಿಗೆ ಮಾತುಕತೆ ನಡೆಸಲಾಗುವುದು' ಎಂದು ಇರಾನ್ ರಾಷ್ಟ್ರೀಯ ಭದ್ರತಾ ಪರಿಷತ್ತು ಟೆಹರಾನ್‌ನಲ್ಲಿ ಪ್ರತಿಕ್ರಿಯಿಸಿದೆ.

## ಇರಾನ್‌ನ ಪ್ರಸ್ತಾವಗಳು

**ಒಂದನೇ ಪುಟದಿಂದ...**

6. ಇರಾನ್ ಮೇಲೆ ವಿವಿಧ ರೀತಿಯ ನಿರ್ಬಂಧಗಳನ್ನು ವಿಧಿಸುವುದಕ್ಕೆ ಸಂಬಂಧಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಕೈಗೊಂಡಿರುವ ಎಲ್ಲ ನಿರ್ಣಯಗಳನ್ನು ರದ್ದುಪಡಿಸಬೇಕು
7. ಇರಾನ್ ಕೈಗೊಂಡಿರುವ ಪರಮಾಣು ಕಾರ್ಯಕ್ರಮ-ಗಳಿಗೆ ಸಂಬಂಧಿಸಿ ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ (ಐಎಇಎ) ಕೈಗೊಂಡಿರುವ ಎಲ್ಲ ನಿರ್ಣಯಗಳನ್ನು ರದ್ದು ಮಾಡಬೇಕು
8. ಯುದ್ಧ ಶುರುವಾದ ನಂತರ ಇರಾನ್‌ನಲ್ಲಿ ಉಂಟಾಗಿರುವ ಹಾನಿಗೆ ಸಂಬಂಧಿಸಿ ಪರಿಹಾರ ನೀಡಬೇಕು
9. ಕೊಲ್ಲಿ ರಾಷ್ಟ್ರಗಳಲ್ಲಿ ಅಮೆರಿಕ ನಿಯೋಜನೆ ಮಾಡಿರುವ ಸಶಸ್ತ್ರ ಪಡೆಗಳನ್ನು ಹಿಂಪಡೆಯಬೇಕು
10. ಲೆಬನಾನ್‌ನಲ್ಲಿರುವ ಇಸ್ಲಾಮಿಕ್ ರೆಸಿಸ್ಟನ್ಸ್ ಸೇರಿ ಎಲ್ಲ ಗುಂಪುಗಳ ವಿರುದ್ಧ ನಡೆಸುತ್ತಿರುವ ಯುದ್ಧ/ಸೇನಾ ಕಾರ್ಯಾಚರಣೆಗಳನ್ನು ನಿಲ್ಲಿಸಬೇಕು

## ‘ಹಡಗುಗಳು ಸಾಗಲು ಬೆದರಿಕೆ’

**ಲಂಡನ್ / ಬೀಜಿಂಗ್ (ರಾಯಿಟರ್ಸ್/ ಪಿಟಿಐ):** ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಕದನ ವಿರಾಮಕ್ಕೆ ಸಮ್ಮತಿಸಿದ್ದರೂ ಹಡಗುಗಳು ಸಾಗುವುದಕ್ಕೆ ಹೊರ್ಮುಜ್ ಜಲಸಂಧಿ ಇನ್ನೂ ಮುಕ್ತವಾಗಿಲ್ಲ ಎಂದು ಹಲವು ಶಿಪ್ಪಿಂಗ್ ಕಂಪನಿ ಮೂಲಗಳು ಬುಧವಾರ ಹೇಳಿವೆ.

‘ಇರಾನ್ ಅನುಮತಿ ಇಲ್ಲದೇ ಈ ಜಲಮಾರ್ಗದ ಮೂಲಕ ಸಾಗುವ ಹಡಗುಗಳನ್ನು ಗುರಿಯಾಗಿಸಿ ದಾಳಿ ಮಾಡಿ, ಅವುಗಳನ್ನು ನಾಶ ಮಾಡಲಾಗುವುದು ಎಂದು ಇರಾನ್ ನೌಕಾಪಡೆ ಬೆದರಿಕೆ ಒಡ್ಡುತ್ತಿದೆ’ ಎಂದೂ ತಿಳಿಸಿವೆ.

ಬುಧವಾರ ಮೂರು ಹಡಗುಗಳು ಮಾತ್ರ ಹೊರ್ಮುಜ್ ಜಲಸಂಧಿ ಮೂಲಕ ಸಾಗಿವೆ.

**ಶಾಂತಿ ಮಾತುಕತೆ ಮೇಲೆ ಅವಲಂಬಿತ:** ‘ಭವಿಷ್ಯದಲ್ಲಿಯೂ ಈ ಜಲಮಾರ್ಗವನ್ನು ಮುಕ್ತವಾಗಿರಿಸುವ ವಿಚಾರವು ಅಮೆರಿಕದ ಜೊತೆ ನಡೆಯುವ ಶಾಂತಿ ಮಾತುಕತೆಯ ಫಲಿತಾಂಶವನ್ನು ಅವಲಂಬಿಸಿದೆ’ ಎಂದು ಚೀನಾದಲ್ಲಿನ ಇರಾನ್ ರಾಯಭಾರಿ ಅಬ್ದುಲ್ ರೆಜಾ ರಹಮಾನಿ ಫಜ್ಲಿ ಬುಧವಾರ ಹೇಳಿದ್ದಾರೆ.

## ಒಪ್ಪಂದಕ್ಕೆ ಕಾರಣವಾದ ಅಂಶಗಳು

- ಇರಾನ್ ಮೇಲೆ ಭೀಕರ ದಾಳಿ ನಡೆಸುವ ಸಂಬಂಧ ತಾನು ವಿಧಿಸಿದ್ದ ಗಡುವಿಗೂ ಒಂದೂವರೆ ಗಂಟೆಗೂ ಮೊದಲು ಕದನ ವಿರಾಮ ಕುರಿತ ಪ್ರಸ್ತಾವಕ್ಕೆ ಡೊನಾಲ್ಡ್ ಟ್ರಂಪ್ ಸಮ್ಮತಿ
- ಇರಾನ್ ಮೇಲೆ ದಾಳಿ ನಡೆಸುವುದಕ್ಕೆ ಸೇನಾ ಪಡೆಗಳನ್ನು ಕಳುಹಿಸುವುದನ್ನು ತಡೆಹಿಡಿಯಬೇಕು ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್, ಫೀಲ್ಡ್ ಮಾರ್ಷಲ್ ಅಸೀಮ್ ಮುನಿರ್ ಮನವಿ
- ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ತಕ್ಷಣದಿಂದಲೇ ಹಾಗೂ ಸಂಪೂರ್ಣವಾಗಿ ಮುಕ್ತಗೊಳಿಸಬೇಕು. ಹಡಗುಗಳ ಸಂಚಾರಕ್ಕೆ ಭದ್ರತೆ ಖಾತ್ರಿಪಡಿಸಬೇಕು. ಈ ಷರತ್ತಿಗೆ ಒಪ್ಪಿದಲ್ಲಿ ಇರಾನ್ ಮೇಲೆ ನಡೆಸುವ ದಾಳಿಗೆ ಎರಡು ವಾರ ನಿಲ್ಲಿಸಲಾಗುವುದು ಎಂಬ ಷರತ್ತು ವಿಧಿಸಿದ ಅಮೆರಿಕ
- ಇರಾನ್ ಮೇಲೆ ಬಾಂಬ್ ಹಾಕುವುದು ಹಾಗೂ ವಾಯು ದಾಳಿ ನಡೆಸುವುದನ್ನು ಎರಡು ವಾರಗಳ ಮಟ್ಟಿಗೆ ಸ್ಥಗಿತಗೊಳಿಸಲು ಒಪ್ಪಿಗೆ. ಇದು ಎರಡೂ ಕಡೆಯವರ ಒಪ್ಪಿಗೆ ಇರುವ ಕದನ ವಿರಾಮ

## ‘ಸ್ವಾಗತಾರ್ಹ ಹೆಜ್ಜೆ’

ಅಮೆರಿಕ ಮತ್ತು ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮವನ್ನು ಭಾರತ ಸ್ವಾಗತಿಸಿದೆ.

‘ಪಶ್ಚಿಮ ಏಷ್ಯಾದಲ್ಲಿ ಶಾಶ್ವತವಾಗಿ ಶಾಂತಿ ನೆಲಸಬೇಕು. ಇದಕ್ಕಾಗಿ ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗಗಳ ಮೂಲಕ ಪ್ರಯತ್ನಗಳನ್ನು ಮುಂದುವರಿಸಬೇಕು’ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ‘ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಜಾಗತಿಕವಾಗಿ ಇಂಧನ ಪೂರೈಕೆ ಹಾಗೂ ವಾಣಿಜ್ಯ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ. ಇದರಿಂದ ಜನರು ತೊಂದರೆ ಅನುಭವಿಸುವಂತಾಗಿದೆ’ ಎಂದು ಹೇಳಿದೆ.

## ‘ಯುದ್ಧ ಮುಕ್ತಾಯದ ಸೂಚನೆಯಲ್ಲ’

ಅಮೆರಿಕ–ಇಸ್ರೇಲ್ ವಿರುದ್ಧದ ಯುದ್ಧಕ್ಕೆ ಸಂಬಂಧಿಸಿ ತಾತ್ಕಾಲಿಕ ವಿರಾಮಕ್ಕೆ ಇರಾನ್ ಒಪ್ಪಿದ್ದರೂ ಎಚ್ಚರಿಕೆಯ ಪ್ರತಿಕ್ರಿಯೆ ನೀಡಿದೆ. ‘ಕದನ ವಿರಾಮಕ್ಕೆ ಇರಾನ್ ಒಪ್ಪಿಕೊಂಡಿದ್ದರೂ ಇದು ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಮುಕ್ತಾಯಗೊಂಡಿದೆ ಎಂಬುದನ್ನು ಸೂಚಿಸುವುದಿಲ್ಲ’ ಎಂದು ಇರಾನ್‌ನ ರಾಷ್ಟ್ರೀಯ ಭದ್ರತಾ ಮಂಡಳಿ ಹೇಳಿದೆ. ‘ಕದನ ವಿರಾಮ ಸಂದರ್ಭದಲ್ಲಿ ಶತ್ರು ಪಾಳಯ ಸಣ್ಣ ಪ್ರಮಾದ ಎಸಗಿದರೂ ಅದಕ್ಕೆ ನಮ್ಮ ಪಡೆಗಳು ತಕ್ಕ ಉತ್ತರ ನೀಡುತ್ತವೆ’ ಎಂದು ಇರಾನ್ ಎಚ್ಚರಿಸಿದೆ.

## ❖ 'ಮೂಢನಂಬಿಕೆ ನಿರ್ಧರಿಸುವ ಹಕ್ಕಿದೆ'

**ಸಂದರ್ಭ: ಧಾರ್ಮಿಕ ಆಚರಣೆಯು ಮೂಢನಂಬಿಕೆಯೋ, ಅಲ್ಲವೋ ಎಂಬುದನ್ನು ಪರಿಗಣಿಸುವ ಹಕ್ಕನ್ನು ತಾನು ಹೊಂದಿರುವುದಾಗಿ ಹೇಳಿದ ಸುಪ್ರೀಂ ಕೋರ್ಟ್, 'ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಾಲಯದ ಭಕ್ತರಲ್ಲದವರು ದೇಗುಲದ ಪದ್ಧತಿಯನ್ನು ಪ್ರಶ್ನಿಸಿ ಪಿಐಎಲ್ ಸಲ್ಲಿಸಬಹುದೇ ಎಂದು ಬುಧವಾರ ಪ್ರಶ್ನಿಸಿದೆ.**

- ಯಾವುದೇ ಧಾರ್ಮಿಕ ಆಚರಣೆಯು ಮೂಢನಂಬಿಕೆಯೋ ಅಥವಾ ಅಲ್ಲವೋ ಎಂಬುದನ್ನು ಪರಿಗಣಿಸುವ ಹಕ್ಕು ಮತ್ತು ನ್ಯಾಯವ್ಯಾಪ್ತಿ ಯನ್ನು ತಾನು ಹೊಂದಿರುವುದಾಗಿ ಹೇಳಿದ ಸುಪ್ರೀಂ ಕೋರ್ಟ್, 'ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಾಲಯದ ಭಕ್ತರಲ್ಲದವರು ದೇಗುಲದ ಪದ್ಧತಿಯನ್ನು ಪ್ರಶ್ನಿಸಿ ಪಿಐಎಲ್ ಸಲ್ಲಿಸಬಹುದೇ' ಎಂದು ಬುಧವಾರ ಪ್ರಶ್ನಿಸಿದೆ.

- ಶಬರಿಮಲೆ ದೇವಸ್ಥಾನ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಮತ್ತು ಬಹು ಧರ್ಮೀಯರು ಆಚರಿಸುವ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ ಕುರಿತು ಸಲ್ಲಿಕೆ ಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠ ಈ ಹೇಳಿಕೆ ನೀಡಿದೆ.
- ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಎಂ.ಎಂ.ಸುಂದರೇಶ್, ಅಜ್ಞಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಆಗಸ್ಟೀನ್ ಜಾರ್ಜ್ ಮಸೀಹ್, ಪ್ರಸನ್ನ ಬಿ. ವರಾಳೆ, ಆರ್. ಮಹದೇವನ್ ಮತ್ತು ಜಾಯ್‌ಮಾಲ್ಯಾ ಬಾಗ್ಚಿ ಅವರು ಈ ಪೀಠದಲ್ಲಿದ್ದಾರೆ
- ಕೇಂದ್ರದ ಪರ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಯಾವುದೇ ಆಚರಣೆಯನ್ನು ಮೂಢನಂಬಿಕೆ ಎಂದು ಊಹಿಸಿದರೂ, ಅದು ಮೂಢನಂಬಿಕೆ ಎಂದು ನಿರ್ಧರಿಸುವುದು ನ್ಯಾಯಾಲಯದ ಕೆಲಸವಲ್ಲ ಅದು ಶಾಸಕಾಂಗದ ಕೆಲಸ ಶಾಸಕಾಂಗವು ಮಧ್ಯಪ್ರವೇಶಿಸಿ ಸುಧಾರಣೆಗಾಗಿ ಕಾನೂನು ರೂಪಿಸುತ್ತದೆ ಎಂದು ಪ್ರತಿಪಾದಿಸಿದರು
- 'ನಿರ್ಧರಿಸುವ ಹಕ್ಕಿದೆ' ಸರ್ಕಾರದ ಈ ವಾದವನ್ನು ಒಪ್ಪದ ಪೀಠವು, ಮೂಢನಂಬಿಕೆಯನ್ನು ನಿರ್ಧರಿಸುವ ಹಕ್ಕು ಮತ್ತು ನ್ಯಾಯವ್ಯಾಪ್ತಿಯನ್ನು ನ್ಯಾಯಾಲಯ ಹೊಂದಿದೆ ಆನಂತರ ಏನು ಮಾಡಬೇಕು ಎಂಬುದನ್ನು ಶಾಸಕಾಂಗ ತೀರ್ಮಾನಿಸಬೇಕು. ಆದರೆ, ಶಾಸಕಾಂಗದ ನಿರ್ಧಾರವೇ ಕೊನೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಪೀಠ ತಿಳಿಸಿತು.
- ತತ್ತ್ವ ಶಾಸ್ತ್ರದ ಮಸೂರದಿಂದ ಗಮನಿಸಬೇಕು. 'ಅಗತ್ಯ ಧಾರ್ಮಿಕ ಆಚರಣೆ ಯಾವುದು ಎಂಬುದನ್ನು ನಿರ್ಧರಿಸುವಾಗ ನ್ಯಾಯಾಲಯವು ಆ ನಿರ್ದಿಷ್ಟ ಧರ್ಮದ ತತ್ತ್ವಶಾಸ್ತ್ರದ ಮಸೂರದ ಮೂಲಕ ನೋಡಬೇಕು' ಎಂದು ನ್ಯಾ ನಾಗರತ್ನ ಅವರು ಅಭಿಪ್ರಾಯಪಟ್ಟರು.

## ❖ ಎನ್‌ಪಿಎಸ್ ಸ್ವಾಸ್ಥ್ಯ ಯೋಜನೆ

**ಸಂದರ್ಭ: ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಅಡಿ ವಿವಿಧ ಕಂಪನಿಗಳ ಸಹಯೋಗದಲ್ಲಿ ರೂಪಿಸಿರುವ ಎನ್‌ಪಿಎಸ್ ಸ್ವಾಸ್ಥ್ಯ ಯೋಜನೆಯ ಸೇವೆಗಳನ್ನು ವಿಸ್ತರಿಸಿದೆ.**

- ನಿವೃತ್ತ ನೌಕರರ ಉಳಿತಾಯದ ಹಣ ಹಾಗೂ ಆರೋಗ್ಯ ಸೇವೆಗಳನ್ನು ಒಂದೆಡೆ ಬಳಸಿಕೊಳ್ಳಲು ಸಹಕಾರಿಯಾಗುವಂತೆ ಪ್ರಾಧಿಕಾರ ಹಲವು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿದೆ. ಈ ಯೋಜನೆಯಡಿ ಪ್ರಮುಖ ಆರೋಗ್ಯ ವಿಮಾ ಸೇವಾ ಕಂಪನಿಗಳು ನೌಕರರಿಗೆ ಸೇವೆಗಳನ್ನು ಒದಗಿಸಲಿವೆ.
- ಎನ್‌ಪಿಎಸ್ ಸ್ವಾಸ್ಥ್ಯ ಯೋಜನೆಯಡಿ ಹೊರ ರೋಗಿಗಳಿಗೆ ಸೇವೆ ಒದಗಿಸುವ ಕುರಿತು ಮೂರು ತಿಂಗಳ ಹಿಂದೆಯೇ ಮಾರ್ಗಸೂಚಿ ಬಿಡುಗಡೆ ಮಾಡ ಲಾಗಿತ್ತು ಈಗ ಒಳ ರೋಗಿಗಳು ಹಾಗೂ ಆಸ್ಪತ್ರೆಗೆ ದಾಖಲಾಗುವವರಿಗೆ ನೀಡುವ ಸೌಲಭ್ಯಗಳ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.
- ಎನ್‌ಪಿಎಸ್ ಸೌಲಭ್ಯವನ್ನು ಪಡೆದ ನೌಕರರು ನಿವೃತ್ತಿವರೆಗೂ ಉಳಿತಾಯ ವನ್ನು ಬಳಸಲು ಅವಕಾಶವಿರಲಿಲ್ಲ ಆದರೆ ಎನ್‌ಪಿಎಸ್ ಸ್ವಾಸ್ಥ್ಯ ಅಡಿಯಲ್ಲಿ ಗ್ರಾಹಕರು ಉಳಿತಾಯದ ಶೇಕಡ 25ರಷ್ಟು ಮೊತ್ತವನ್ನು ಬಳಸಿಕೊಳ್ಳಲು ಅವಕಾಶವಿದೆ. ಇದನ್ನು ವೈದ್ಯಕೀಯ ವೆಚ್ಚಗಳಿಗೆ ಉಪಯೋಗಿಸಬಹುದು. ಮೆಡಿ ಅಸಿಸ್ಟ್ ಹೆಲ್ತ್ ಕೇರ್ ಸರ್ವೀಸಸ್ ರೂಪಿಸಿರುವ ಮಾವೆನ್ ಆ್ಯಪ್ ಬಳಸಿ ಸೇವೆ ಪಡೆಯಬಹುದು.

## ❖ 'ಸುಪ್ರೀಂ' ಎರಡು ತೀರ್ಪುಗಳು ಒಳ್ಳೆಯ ಕಾನೂನಲ್ಲ: ಕೇಂದ್ರ

**ಸಂದರ್ಭ: 'ವ್ಯಭಿಚಾರ ಮತ್ತು ಸಲಿಂಗಕಾಮಿಗಳ ಒಪ್ಪಿತ ಸಂಬಂಧ ಅಪರಾಧವಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ಎರಡು ಮಹತ್ವದ ತೀರ್ಪುಗಳು ಒಳ್ಳೆಯ ಕಾನೂನುಗಳಲ್ಲ' ಎಂದು ಕೇಂದ್ರ ಸರ್ಕಾರ ಹೇಳಿದೆ.**

- 'ಈ ತೀರ್ಪುಗಳು ಸಾಂವಿಧಾನಿಕ ನೈತಿಕತೆಯ ವ್ಯಕ್ತಿನಿಷ್ಠ ಅಭಿಪ್ರಾಯವನ್ನು ಆಧರಿಸಿದ್ದಾಗಿವೆ. ಹಾಗಾಗಿ, ಇವನ್ನು ಒಳ್ಳೆಯ ಕಾನೂನುಗಳಲ್ಲ ಎಂದು ಘೋಷಿಸಬೇಕು' ಎಂದು ಕೇಂದ್ರ ಸರ್ಕಾರ ಮನವಿ ಮಾಡಿದೆ.
- ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಎದುರು ಕೇಂದ್ರ ಈ ಮನವಿ ಸಲ್ಲಿಸಿದೆ.
- 'ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ'ಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಒಂಬತ್ತು ಪ್ರಶ್ನೆಗಳನ್ನು ರೂಪಿಸಿದೆ ಸಂವಿಧಾನದ 25 ಮತ್ತು 26ನೇ ವಿಧಿಯಲ್ಲಿನ ನೈತಿಕತೆ ಎಂಬ ಪದದ ವ್ಯಾಪ್ತಿ ಏನು, ಇದು ಸಾಂವಿಧಾನಿಕ ನೈತಿಕತೆಯನ್ನು ಒಳಗೊಳ್ಳುವುದೇ' ಎಂದು ಕೇಂದ್ರಕ್ಕೆ ಪ್ರಶ್ನಿಸಿದೆ.
- 'ಸಾಂವಿಧಾನಿಕ ನೈತಿಕತೆ ಎನ್ನುವುದು ಒಂದು ಭಾವನೆಯಾಗಿದೆ. ಈ ವ್ಯಕ್ತಿನಿಷ್ಠ ಪರಿಕಲ್ಪನೆಯನ್ನು ನ್ಯಾಯಾಂಗವು ಶಾಸನ ಪರಿಶೀಲನೆಗೆ ಬಳಸಬಾರದು' ಎಂದು ಕೇಂದ್ರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ಮನವಿ ಮಾಡಿದರು

## ❖ ಎಐ ಕಾರ್ಖಾನೆ: ದಯಾನಂದ ಸಾಗರ್ ವಿ.ವಿ ಒಪ್ಪಂದ

**ಸಂದರ್ಭ: ಭಾರತದಲ್ಲಿ ಮೊದಲ ಎಐ ಕಾರ್ಖಾನೆಯನ್ನು ನಿರ್ಮಿಸಲು ದಯಾನಂದ ಸಾಗರ್ ವಿಶ್ವವಿದ್ಯಾಲಯವು ಎನ್‌ಡಿಯಾದೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ.**

- ಎನ್‌ಡಿಯಾವು ಮುಂದಿನ ಪೀಳಿಗೆಯ ಎಐ ಸೂಪರ್ ಕಂಪ್ಯೂಟಿಂಗ್ ವೇದಿಕೆಯಾಗಿರುವ 'ಬ್ಲ್ಯಾಕ್‌ವೆಲ್ ಬಳಸಿಕೊಳ್ಳಲಿದೆ. ಕಡಿಮೆ ಸುಸಜ್ಜಿತ ಮೂಲಸೌಕರ್ಯ, ವಿದೇಶಿ ಎಐ ಮಾದರಿಗಳ ಬಳಕೆ, ದೇಶೀಯ ಸೂಪರ್ ಕಂಪ್ಯೂಟಿಂಗ್ ತಂತ್ರಜ್ಞಾನಗಳ ಕೊರತೆ ಮತ್ತು ಶೈಕ್ಷಣಿಕ ತರಬೇತಿ ಮತ್ತು ಉದ್ಯಮ ನಿಯೋಜನೆ ಅಗತ್ಯಗಳ ನಡುವಿನ ನ್ಯೂನತೆಗಳನ್ನು ನಿವಾರಿಸುವ ಉದ್ದೇಶವನ್ನು ಈ ಒಡಂಬಡಿಕೆ ಹೊಂದಿದೆ.
- ದಯಾನಂದ ಸಾಗರ್ ವಿಶ್ವವಿದ್ಯಾಲಯವು ₹175 ಕೋಟಿ ಹೂಡಿಕೆ ಮಾಡಲಿದೆ. ಶೈಕ್ಷಣಿಕ ವ್ಯವಸ್ಥೆಯಲ್ಲಿ ಉತ್ತಮ ಗುಣಮಟ್ಟದ ಎಐ ಕಂಪ್ಯೂಟಿಂಗ್ ಬಳಕೆಯಾಗಲಿದೆ.
- 'ಎನ್‌ವಿಡಿಯಾ ಜೊತೆಗಿನ ಸಹಯೋಗದಿಂದಾಗಿ ನಮ್ಮ ವಿಶ್ವವಿದ್ಯಾಲಯವು ಎಐ ಕ್ಷೇತ್ರದಲ್ಲಿ ನಾವಿನ್ಯತೆಯನ್ನು ಬಳಸಿಕೊಳ್ಳಲಿದೆ. ಎಐ ಬಳಕೆಯ ವಿಧಾನದಲ್ಲಿ ಬದಲಾವಣೆ ಉಂಟಾಗಲಿದೆ' ಎಂದು ದಯಾನಂದ ಸಾಗರ್ ವಿಶ್ವವಿದ್ಯಾಲಯದ ಸ್ಥಾಪಕ ಡಿ. ಪ್ರೇಮಚಂದ್ರ ಸಾಗರ್ ತಿಳಿಸಿದರು.
- 'ಎನ್‌ವಿಡಿಯಾ ಚಾಲಿತ ಎಐ ಕಾರ್ಖಾನೆ ಸ್ಥಾಪಿಸಲಾಗುವುದು ಆ ಮೂಲಕ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಎಐ ವ್ಯವಸ್ಥೆಗಳಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡಲಾಗುವುದು, ಆತ್ಮನಿರ್ಭರ ಭಾರತ, ತಂತ್ರಜ್ಞಾನ ಅಭಿವೃದ್ಧಿ, ಜವಾಬ್ದಾರಿಯುತವಾಗಿ ಎಐ ಬಳಕೆ ಸೇರಿದಂತೆ ದೀರ್ಘಕಾಲೀನ ಗುರಿಗಳನ್ನು ಹೊಂದಿದ್ದೇವೆ' ಎಂದು ವಿವರಿಸಿದರು.
- ದಯಾನಂದ ಸಾಗರ್ ವಿಶ್ವವಿದ್ಯಾಲಯವು ಆರೋಗ್ಯ, ಎಂಜಿನಿಯರಿಂಗ್, ರಕ್ಷಣೆ, ಸೈಬರ್ ಭದ್ರತೆ, ಅರೆವಾಹಕಗಳು, ಸ್ಮಾರ್ಟ್ ಚಲನಶೀಲತೆ ಮತ್ತು ಸುಸ್ಥಿರತೆಯ ಮೇಲೆ ಕೇಂದ್ರೀಕರಿಸುವ ಕೆಪೆಕ್ಸ್‌ನಲ್ಲಿ 150 ಕೋಟಿಗೂ ಅಧಿಕ ವೆಚ್ಚದಲ್ಲಿ ಆರು ಉದ್ಯಮ-ಸಂಯೋಜಿತ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸಲಿದೆ. ಈ ಕೇಂದ್ರಗಳು ವಿಶೇಷ ಎಐ ಸಂಶೋಧನೆ ಮತ್ತು ಅನ್ವಯಿಕಾ ಕೇಂದ್ರಗಳಾಗಿ ಕಾರ್ಯನಿರ್ವಹಿಸಲಿವೆ ಎಂದರು.

Dr. Rajkumar IAS Academy

## ❖ ಬೇಡ್ತಿ-ವರದಾ: ಆಂಧ್ರ ಪ್ರದೇಶ ಸರ್ಕಾರದ ತಗಾದೆ: 'ನದಿ ಜೋಡಣೆಯಲ್ಲೂ ಪಾಲು'

**ಸಂದರ್ಭ: ಪ್ರಸ್ತಾವಿತ ಬೇಡ್ತಿ-ವರದಾ ನದಿಗಳ ಜೋಡಣೆ ವೇಳೆಯಲ್ಲಿ ತಮ್ಮ ರಾಜ್ಯಕ್ಕೆ ನ್ಯಾಯಬದ್ಧವಾದ ನೀರು ಹಂಚಿಕೆ ಮಾಡಬೇಕು ಎಂದು ಆಂಧ್ರ ಪ್ರದೇಶ ಸರ್ಕಾರ ತಗಾದೆ ಎತ್ತಿದೆ.**

- ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಳಕ್ಕೆ ಅನುವು ಮಾಡಿಕೊಡಬಾರದು ಎಂದು ಅಂಧ್ರ ಪ್ರದೇಶ ಸರ್ಕಾರವು ಜಲಶಕ್ತಿ ಸಚಿವಾಲಯಕ್ಕೆ ಜನವರಿಯಲ್ಲಿ ಪತ್ರ ಬರೆದಿತ್ತು ಅದರ ಬೆನ್ನಲ್ಲೇ, ನೆರೆ ರಾಜ್ಯವು ನದಿ ಜೋಡಣೆಯ ನೀರು ಹಂಚಿಕೆ ವಿಷಯದಲ್ಲೂ ತಕರಾರು ಶುರು ಮಾಡಿದೆ.
- ನದಿ ಜೋಡಣೆಯ ವಿಷಯದಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ತನ್ನ ನಿಲುವನ್ನು ತಿಳಿಸಿರುವ ಆಂಧ್ರ ಪ್ರದೇಶ ಸರ್ಕಾರ, 'ಈ ನದಿಗಳನ್ನು ಜೋಡಿಸುವ ಮೂಲಕ 18.50 ಟಿಎಂಸಿ ಅಡಿ ನೀರನ್ನು ಕೃಷ್ಣಾ ಜಲಾನಯನ ಪ್ರದೇಶಕ್ಕೆ ತಿರುಗಿಸಲು ಪ್ರಸ್ತಾಪಿಸಲಾಗಿದೆ. ಹೀಗಾಗಿ, ಕೃಷ್ಣಾ ನ್ಯಾಯಮಂಡಳಿ ತೀರ್ಪಿನ ಪ್ರಕಾರ, ರಾಜ್ಯಕ್ಕೆ ಪಾಲು ನೀಡಬೇಕು' ಎಂದು ಆಗ್ರಹಿಸಿದೆ.
- ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ನದಿ ಜೋಡಣೆಯ ವಿಶೇಷ ಸಮಿತಿಯ ಸಭೆಯಲ್ಲೂ ಈ ಬೇಡಿಕೆ ಮುಂದಿಟ್ಟಿದೆ. ಇನ್ನೊಂದೆಡೆ, ನದಿ ಜೋಡಣೆ ಕುರಿತು ರಾಜ್ಯಗಳು ಒಮ್ಮತಕ್ಕೆ ಬಂದಿಲ್ಲ.
- ಜತೆಗೆ, ರಾಜ್ಯಕ್ಕೆ ಕನಿಷ್ಠ ಪಾಲು ಹಂಚಿಕೆ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದ ಅಂತರ್ ರಾಜ್ಯ ವಿವಾದಗಳು ಬಗೆಹರಿದ ಬಳಿಕವಷ್ಟೇ ನದಿಗಳ ಜೋಡಣೆಯ ಒಪ್ಪಂದಕ್ಕೆ ಸಹಿ ಹಾಕುವುದಾಗಿ ಕರ್ನಾಟಕ ಸರ್ಕಾರ ಸ್ಪಷ್ಟಪಡಿಸಿದೆ.
- ಗೋದಾವರಿ-ಕಾವೇರಿ ನದಿ ಜೋಡಣೆಯ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಕರ್ನಾಟಕ ಆಕ್ಷೇಪ ವ್ಯಕ್ತಪಡಿಸಿತ್ತು ರಾಜ್ಯಕ್ಕೆ ಹಂಚಿಕೆ ಮಾಡಿರುವ ನೀರಿನ ಪ್ರಮಾಣ ಭಾರಿ ಕಡಿಮೆ ಇದ್ದು. ಪಾಲು ಹೆಚ್ಚಿಸಿದರೆ ಮಾತ್ರ ಒಪ್ಪಂದಕ್ಕೆ ಸಹಿ ಹಾಕುವುದಾಗಿ ರಾಜ್ಯ ಸರ್ಕಾರ ಸ್ಪಷ್ಟಪಡಿಸಿತ್ತು ಆ ಬಳಿಕ, ಬೇಡ್ತಿ-ವರದಾ ನದಿಗಳ ಜೋಡಣೆ ಪ್ರಸ್ತಾವವನ್ನು ಈ ಯೋಜನೆಯಲ್ಲಿ ಸೇರಿಸಲಾಗಿತ್ತು.
- ಧಾರವಾಡ ಜಿಲ್ಲೆಯಲ್ಲಿ ಉಗಮಗೊಂಡು ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಹರಿದು ಅರಬ್ಬಿ ಸಮುದ್ರ ಸೇರುವ ಬೇಡ್ತಿ ನದಿಯನ್ನು ಹಾವೇರಿ ಮತ್ತು ಗದಗ ಜಿಲ್ಲೆಯ ವ್ಯಾಪ್ತಿಗೆ ನೀರು ಪೂರೈಕೆಗೆ ವರದಾ ನದಿಗೆ ಜೋಡಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ, ಕರ್ನಾಟಕ ಸರ್ಕಾರ ಒಪ್ಪಿಗೆ ಸೂಚಿಸಿದೆ.
- ಹಾವೇರಿ, ಗದಗ, ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿ ನೀರಾವರಿ, ಕುಡಿಯುವ ನೀರು ಪೂರೈಕೆ ಕೈಗಾರಿಕೆಗಳಿಗೆ ನೀರು ಒದಗಿಸುವುದು ಈ ಯೋಜನೆಯ ಉದ್ದೇಶ ನದಿ ನೀರು ಸಂಗ್ರಹಕ್ಕೆ ಶಿರಸಿಯ ಸಹಸ್ರಲಿಂಗ ಮತ್ತು ಪಟ್ಟಣದ ಹೊಳೆ ಬಳಿ ಹಾಗೂ ಯಲ್ಲಾಪುರದ ಬೇಡ್ತಿ ಸೇತುವೆ ಸಮೀಪ ಕಿರು ಅಣೆಕಟ್ಟೆ ನಿರ್ಮಾಣ ಮಾಡಲಾಗುತ್ತದೆ ಅಲ್ಲಿಂದ 246.58 ಕಿ.ಮೀ ಪೈಪ್‌ಲೈನ್ ಮೂಲಕ ನೀರುಕೊಂಡೊಯ್ಯಲಾಗುತ್ತದೆ ಈ ನದಿಗಳ ಜೋಡಣೆಯಿಂದಾಗಿ 1.04 ಲಕ್ಷ ಹೆಕ್ಟೇರ್‌ಗೆ ನೀರಾವರಿ ಒದಗಿಸಬಹುದು ಎಂದು ಡಿಪಿಆರ್‌ನಲ್ಲಿ ಉಲ್ಲೇಖಿಸಲಾಗಿದೆ.

### ತೆಲಂಗಾಣದಿಂದಲೂ ರಗಳೆ

- ಗೋದಾವರಿ-ಕಾವೇರಿ ನದಿಗಳ ಜೋಡಣೆ ಸಂದರ್ಭದಲ್ಲಿ ಬದಲಿ ವಿಧಾನದ ಮೂಲಕ ಆಲಮಟ್ಟಿಯಿಂದ ಕರ್ನಾಟಕಕ್ಕೆ 16 ಟಿಎಂಸಿ ಅಡಿ ನೀರು ಹಂಚಿಕೆ ಮಾಡುವುದನ್ನು ಮರು ಪರಿಶೀಲಿಸಬೇಕು ಎಂದು ತೆಲಂಗಾಣ ಸರ್ಕಾರವು ಜಲಶಕ್ತಿ ಸಚಿವಾಲಯದ ಮೇಲೆ ಒತ್ತಡ ಹೇರಿದೆ. ನೀರಿನ ಹಂಚಿಕೆಯಿಂದ ತೆಲಂಗಾಣದ ಜುರಾಲಾ ಯೋಜನೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ದೂರಿದೆ.

## ❖ 'ಸಾತ್ವಿಕ್' ಬ್ರ್ಯಾಂಡ್ ಖರೀದಿಸಿದ 'ಸೈಕಲ್ ಪ್ಯೂರ್'

**ಸಂದರ್ಭ: ಅಗರಬತ್ತಿ ಮಾರುಕಟ್ಟೆಯಲ್ಲಿ ಮುಂಚೂಣಿ ಕಂಪನಿಯಾಗಿರುವ ಸೈಕಲ್ ಪ್ಯೂರ್. ಪೂಜಾ ಸಾಮಗ್ರಿಗಳ ಕಂಪನಿ 'ಸಾತ್ವಿಕ್ ಅನ್ನು ಸ್ವಾಧೀನಪಡಿಸಿಕೊಂಡಿದೆ.**

Dr. Rajkumar IAS/KAS Academy

- ಈ ಸ್ವಾಧೀನದ ಮೂಲಕ, ಡಿಜಿಟಲ್ ಲೋಕದಲ್ಲಿ 'ಸಾತ್ವಿಕ್ ಬ್ರ್ಯಾಂಡ್ ಹೊಂದಿರುವ ಪ್ರಾಬಲ್ಯವನ್ನು ಬಳಸಿಕೊಳ್ಳಲು, ಪೂಜಾ ಸಾಮಗ್ರಿಗಳಿಗೆ ಇರುವ ಬೇಡಿಕೆಗೆ ಸ್ಪಂದಿಸಲು ಸಾಧ್ಯವಾಗಲಿದೆ ಎಂದು ಸೈಕಲ್ ಪ್ಯೂರ್ ಕಂಪನಿ ಹೇಳಿದೆ.
- ಸ್ವಾಧೀನದ ಕುರಿತ ಮಾಹಿತಿಯನ್ನು ಸೈಕಲ್ ಪ್ಯೂರ್ ಅಗರಬತ್ತಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಹಂಚಿಕೊಂಡರು.
- 'ಹೊಸ ಸ್ವಾಧೀನವು ನಮಗೆ ಉತ್ಕೃಷ್ಟವಾದ ಉತ್ಪನ್ನಗಳನ್ನು ಗ್ರಾಹಕರಿಗೆ ಒದಗಿಸಲು, ಬಹಳ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಡಿಜಿಟಲ್ ಮಾರುಕಟ್ಟೆಯಲ್ಲಿ ನಮ್ಮ ಬೆಳವಣಿಗೆಯನ್ನು ಹೆಚ್ಚು ಮಾಡಲು ನೆರವಾಗುತ್ತದೆ ಅಲ್ಲದೆ, ಸಂಪ್ರದಾಯವನ್ನು ಉಳಿಸಿಕೊಂಡು ಹೊಸತನವನ್ನು ಒಪ್ಪಿಕೊಳ್ಳಲು ಕೂಡ ಇದು ನಮಗೆ ಸಹಾಯ ಮಾಡುತ್ತದೆ' ಎಂದು ಅರ್ಜುನ್ ಅವರು ತಿಳಿಸಿದರು.
- ಸ್ವಾಧೀನದ ನಂತರವೂ ಸಾತ್ವಿಕ್ ಬ್ರ್ಯಾಂಡ್‌ನ ಅಸ್ತಿತ್ವ ಉಳಿದುಕೊಳ್ಳುತ್ತದೆ. ಅದರ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ವಿನೋದ್ ಬನ್ಸಲ್ ಅವರೇ ಕಂಪನಿಯನ್ನು ಮುನ್ನಡೆಸಲಿದ್ದಾರೆ ಎಂದು ಅರ್ಜುನ್ ಸ್ಪಷ್ಟಪಡಿಸಿದರು.
- ಕಂಪನಿಯ ಪೂಜಾ ಸಾಮಗ್ರಿಗಳ ಮಾರಾಟ ಪ್ರಮಾಣವು ಕ್ವಿಕ್-ಕಾಮರ್ಸ್ ವೇದಿಕೆಗಳಲ್ಲಿ ಬಹಳ ವೇಗದ ಬೆಳವಣಿಗೆ ಕಾಣುತ್ತಿದೆ ಎಂದು ಅರ್ಜುನ್ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ❖ ಕುಸ್ತಿ: ಬೆಳ್ಳಿ ಜಯಿಸಿದ ನಿತೇಶ್

**ಸಂದರ್ಭ: ಭಾರತದ ಗ್ರೀಕೊ-ರೋಮನ್ ಕುಸ್ತಿಪಟುಗಳು ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಒಂದು ಬೆಳ್ಳಿ ಹಾಗೂ ಎರಡು ಕಂಚಿನ ಪದಕ ಗೆದ್ದರು.**

- ಅನುಭವಿ ಪೈಲ್ವಾನ್ ನಿತೇಶ್ ಸಿವಾಚ್ ಅವರು ಪುರುಷರ 97 ಕೆ.ಜಿ. ವಿಭಾಗದಲ್ಲಿ ರಜತ ಜಯಿಸಿದರು. ಸಚಿನ್ ಹಾಗೂ ಪ್ರಿನ್ಸ್ ಕಂಚಿನ ಪದಕ ಜಯಿಸಿದರು.
- ನಿತೇಶ್ ಅವರು ಫೈನಲ್‌ನಲ್ಲಿ 1-7ರಿಂದ ಇರಾನ್ ಮೊಹಮ್ಮದಾದಿ ಮೊಹಮ್ಮದ್ಹದಿ ಸರವಿ ವಿರುದ್ಧ ಪರಾಭವಗೊಂಡರು. ಅದರೊಂದಿಗೆ ಸರವಿ ಅವರು ಸತತ ಎರಡನೇ ಬಾರಿಗೆ ಸ್ವರ್ಣ ತಮ್ಮದಾಗಿಸಿಕೊಂಡರು.
- ಪುರುಷರ 67 ಕೆ.ಜಿ. ವಿಭಾಗದ ಕಂಚಿನ ಪದಕಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಸಚಿನ್ 6-5ರಿಂದ ಉಜ್ಬೇಕಿಸ್ತಾನದ ಅಬ್ದುಮಲಿಕ್ ಅಮಿನೊವ್ ವಿರುದ್ಧ ರೋಚಕ ಜಯ ಸಾಧಿಸಿದರು.


ಬೆಳ್ಳಿ ಪದಕ ಜಯಿಸಿದ ನಿತೇಶ್
'ಎಕ್ಸ್' ಚಿತ್ರ

- ಪ್ರಿನ್ಸ್ ಅವರು ಪುರುಷರ 82 ಕೆ.ಜಿ. ವಿಭಾಗದಲ್ಲಿ 10-1ರಿಂದ ತುರ್ಕಮೆನಿಸ್ತಾನದ ದೀದರ್ ಅಮನ್ನಝುರೊವ್ ಅವರನ್ನು ಮಣಿಸಿ, ಕಂಚಿನ ಪದಕಕ್ಕೆ ಕೊರಳೊಡ್ಡಿದರು.

## ❖ ಜಂಟಿ ಅಗ್ರಸ್ಥಾನಕ್ಕೆ ಏರಿದ ವೈಶಾಲಿ

- ವಿಶ್ವಕಪ್ ವಿಜೇತೆ ಹಾಗೂ ಸ್ವದೇಶದ ಆಟಗಾರ್ತಿ ದಿವ್ಯಾ ದೇಶಮುಖ್ ಅವರನ್ನು ಬುಧವಾರ ಸೋಲಿಸಿದ ಭಾರತದ ವೈಶಾಲಿ ಆರ್. ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನ ನಂತರ ಚೀನಾದ ಝು ಜಿನರ್ ಜೊತೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.
- ವೈಶಾಲಿ ಮತ್ತು ಜಿನೆರ್ ತಲಾ 5.5 ಅಂಕ ಗಳಿಸಿದ್ದಾರೆ. ಜಿನೆರ್ ಒಂಬತ್ತನೇ ಸುತ್ತಿನಲ್ಲಿ ರಷ್ಯಾದ ಕ್ಯಾತರಿನಾ ಲಾಗ್ನೊ (4.5) ಅವರನ್ನು ಮಣಿಸಿದರು.


ಭಾರತದ ಆರ್. ವೈಶಾಲಿ

## ❖ ಯುದ್ಧದ ಪರಿಣಾಮ ಎದುರಿಸಲು ಸಮರ್ಥ

**ಸಂದರ್ಭ: ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಗೆ ಆಗಿರುವ ಧಕ್ಕೆಯನ್ನು ನಿಭಾಯಿಸುವ ಸಾಮರ್ಥ್ಯವು ಭಾರತಕ್ಕೆ ಇದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.**

- ಭಾರತದ ಬಳಿ ವಿದೇಶಿ ವಿನಿಮಯದ ಮೀಸಲು ಹೆಚ್ಚಿನ ಮಟ್ಟದಲ್ಲಿದೆ, ಅಗತ್ಯ ವಿತ್ತೀಯ ತೀರ್ಮಾನಗಳನ್ನು ತೆಗೆದುಕೊಳ್ಳಲು ಅವಕಾಶ ಇದೆ, ದೇಶದಲ್ಲಿ ಹಣದುಬ್ಬರ ಪ್ರಮಾಣ ಕಡಿಮೆ ಇದೆ. ಜಾಗತಿಕವಾಗಿ ಸಮಸ್ಯೆಗಳು ಇದ್ದರೂ ಇವೆಲ್ಲವೂ ಭಾರತದ ಬೆಳವಣಿಗೆಗೆ ಸಹಾಯ ಮಾಡುತ್ತವೆ ಎಂದು ವಿಶ್ವ ಬ್ಯಾಂಕ್‌ನ ದಕ್ಷಿಣ ಏಷ್ಯಾದ ಹಿರಿಯ ಅಧಿಕಾರಿ ಸೆಬಾಸ್ಟಿಯನ್ ಎಕಾರ್ಟ್ ಗುರುವಾರ ಹೇಳಿದ್ದಾರೆ.
- ಹಿಂದಿನ ತ್ರೈಮಾಸಿಕದ ಅವಧಿಯಲ್ಲಿ ಸುಂಕದ ಕಾರಣದಿಂದಾಗಿ ಉಂಟಾದ ಸಮಸ್ಯೆಗಳನ್ನು ಕೂಡ ಭಾರತವು ಚೆನ್ನಾಗಿಯೇ ನಿಭಾಯಿಸಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
- 'ಜಾಗತಿಕವಾಗಿ ಸಮಸ್ಯೆಗಳು ಇದ್ದರೂ ಭಾರತ ಮತ್ತು ಈ ಭಾಗವು ಬಹಳ ಸುಭದ್ರ ಸ್ಥಿತಿಯಲ್ಲಿ ಇರಲಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ ಇತರ ದೇಶಗಳಿಗಿಂತ ಭಾರತವು ಉತ್ತಮ ಸಾಧನೆ ತೋರಲಿದೆ ಎಂಬುದು ನಮ್ಮ ಅನಿಸಿಕೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.
- ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಚೆನ್ನಾಗಿ ಇದ್ದುದು ಮತ್ತು ರಫ್ತು, ವಹಿವಾಟುಗಳು ಉತ್ತಮ ಮಟ್ಟದಲ್ಲಿ ಇದ್ದ ಕಾರಣದಿಂದಾಗಿ ಭಾರತದ ಅರ್ಥ ವ್ಯವಸ್ಥೆಯು 2025-26ನೆಯ ಹಣಕಾಸು ವರ್ಷದಲ್ಲಿ ಶೇ.7.6ರಷ್ಟು ಬೆಳವಣಿಗೆ ಕಂಡಿರುವ ಅಂದಾಜು ಇದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.
- 2025-26ನೆಯ ಹಣಕಾಸು ವರ್ಷದಲ್ಲಿ ಕೂಡ ಭಾರತವು ಜಗತ್ತಿನ ದೊಡ್ಡ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ಹೆಚ್ಚಿನ ವೇಗದ ಬೆಳವಣಿಗೆ ಕಂಡ ರಾಷ್ಟ್ರವಾಗಿ ಮುಂದುವರಿದಿದೆ. ಭಾರತದ ಸರಕುಗಳಿಗೆ ಜಾಗತಿಕವಾಗಿ ಬಹಳ ದೊಡ್ಡ ಮಟ್ಟದಲ್ಲಿ ಸುಂಕ ವಿಧಿಸಿದರೂ, ಈ ಬೆಳವಣಿಗೆ ಆಗಿದೆ ಎಂದು ವಿಶ್ವ ಬ್ಯಾಂಕ್‌ನ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ಆರೆಲಿಯನ್ ಕ್ರೂಸ್ ಹೇಳಿದ್ದಾರೆ.
- ಕಳೆದ ವರ್ಷದಲ್ಲಿ ಕೇಂದ್ರ ಸರ್ಕಾರವು ಆದಾಯ ತೆರಿಗೆ ಮಿತಿಯನ್ನು ಹೆಚ್ಚು ಮಾಡಿದ್ದು ಹಾಗೂ ಜಿಎಸ್‌ಟಿ ಮಂಡಳಿಯು ತೆರಿಗೆ ಪ್ರಮಾಣವನ್ನು ಪರಿಷ್ಕರಿಸಿದ ಕ್ರಮವು ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು ಮಾಡಿವೆ. ಹೆಚ್ಚಿನ ಸುಂಕದ ಕಾರಣದಿಂದಾಗಿ ತೊಂದರೆಗೆ ಒಳಗಾಗಬಹುದು ಎಂಬ ಅಂದಾಜು ಮಾಡಿದ್ದ ರಫ್ತು, ಹಾಗೂ ಹೂಡಿಕೆ ವಲಯಗಳು ನಿರೀಕ್ಷೆಗಿಂತ ಉತ್ತಮ ಬೆಳವಣಿಗೆ ಕಂಡಿವೆ ಎಂದು ಅವರು ತಿಳಿಸಿದ್ದಾರೆ.

## ❖ ಭಾರತದ ಬೆಳವಣಿಗೆ ಹೆಚ್ಚಳ

**ಸಂದರ್ಭ: ಏಪ್ರಿಲ್ 1ರಿಂದ ಆರಂಭವಾಗಿರುವ ಪ್ರಸಕ್ತ ಆರ್ಥಿಕ ವರ್ಷದಲ್ಲಿ (2026-27) ಭಾರತದ ಜಿಡಿಪಿ ಬೆಳವಣಿಗೆ ದರವು ಶೇ 6.6ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ಅಂದಾಜು ಮಾಡಿದೆ.**

- ಜಿಎಸ್‌ಟಿ ದರ ಪರಿಷ್ಕರಣೆಯ ಕ್ರಮವು ಗ್ರಾಹಕರಿಂದ ಬರುವ ಬೇಡಿಕೆಯನ್ನು ಈ ಆರ್ಥಿಕ ವರ್ಷದ ಆರಂಭದ ತಿಂಗಳುಗಳಲ್ಲಿ ಹೆಚ್ಚು ಮಾಡುತ್ತದೆ. ಆದರೆ, ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಸೃಷ್ಟಿಯಾಗಿರುವ ಸಮಸ್ಯೆಗಳು ಬೆಳವಣಿಗೆಯನ್ನು ಕುಂದಿಸಬಹುದು ಎಂದು ಅದು ಹೇಳಿದೆ.
- ಜನವರಿಯಲ್ಲಿ ಒಂದು ಅಂದಾಜನ್ನು ಬಿಡುಗಡೆ ಮಾಡಿದ್ದ ವಿಶ್ವ ಬ್ಯಾಂಕ್, 2026-27ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ 6.5ರಷ್ಟು ಆಗಬಹುದು ಎಂದು ಹೇಳಿತ್ತು. ಆದರೆ ಈಗಿನ ಅಂದಾಜು ಅದಕ್ಕಿಂತ ಹೆಚ್ಚು

## ❖ ಆಧಾರ್: 'ಸುಪ್ರೀಂ'ಗೆ ಪಿಐಎಲ್ ಸಲ್ಲಿಕೆ

**ಸಂದರ್ಭ: ಆರು ವರ್ಷದೊಳಗಿನ ಭಾರತೀಯ ಪ್ರಜೆಗಳಿಗೆ ಮಾತ್ರ ಆಧಾರ್ ಕಾರ್ಡ್ ವಿತರಿಸುವಂತೆ ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು ಸಲ್ಲಿಕೆಯಾಗಿದೆ.**

- ಒಳ ನುಸುಳುಕೋರರಿಂದ ಆಗುತ್ತಿರುವ ದುರ್ಬಳಕೆ ತಡೆಯಲು ಆರು ವರ್ಷದೊಳಗಿನ ಭಾರತೀಯ ಪ್ರಜೆಗಳಿಗೆ ಮಾತ್ರ ಆಧಾರ್ ಕಾರ್ಡ್ ವಿತರಿಸುವಂತೆ ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರಕ್ಕೆ (ಯುಐಡಿಎಐ) ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು ಸಲ್ಲಿಕೆಯಾಗಿದೆ.
- ಭಾರತೀಯ ನಾಗರಿಕರು ಎಂದು ನುಸುಳುಕೋರರು ಬಿಂಬಿಸಿಕೊಳ್ಳುವುದನ್ನು ನಿಯಂತ್ರಿಸುವ ಉದ್ದೇಶದಿಂದ ಹರೆಯದವರು ಮತ್ತು ವಯಸ್ಕರಿಗೆ ಆಧಾರ್ ವಿತರಿಸಲು ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ರೂಪಿಸುವ ಅಗತ್ಯ ಇದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ.
- ವಕೀಲರಾದ ಅಶ್ವಿನಿ ಉಪಾಧ್ಯಾಯ ಎಂಬುವರು ಅಶ್ವಿನಿ ದುಬೆ ಎಂಬುವರ ಮೂಲಕ ಅರ್ಜಿ ಸಲ್ಲಿಸಿದ್ದಾರೆ.
- '12 ಅಂಕಿಗಳ ಡಿಜಿಟಲ್ ಆಧಾರ್ ಸಂಖ್ಯೆ ಗುರುತಿನ ದಾಖಲೆಯೇ ಹೊರತು ಪೌರತ್ವದ ಆಧಾರವಲ್ಲ' ಎಂಬ ಪ್ರದರ್ಶನ ಫಲಕಗಳನ್ನು ಆಧಾರ್ ಸೇವಾ ಕೇಂದ್ರಗಳ ಮುಂದೆ ಅಳವಡಿಸಬೇಕು' ಎಂದು ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆ.
- ಪ್ರಾಧಿಕಾರ 144 ಕೋಟಿ ಆಧಾರ್ ಕಾರ್ಡ್ ವಿತರಿಸಿದೆ. ಶೇ 99ರಷ್ಟು ಭಾರತೀಯರು ನೋಂದಣಿ ಮಾಡಿಕೊಂಡಿದ್ದಾರೆ. ಹೀಗಾಗಿ ಇನ್ನು ಮುಂದೆ ಆರು ವರ್ಷದ ಒಳಗಿನವರಿಗೆ ಮಾತ್ರ ಆಧಾರ್ ಸಂಖ್ಯೆ ವಿತರಿಸುವಂತೆ ಸಂವಿಧಾನದ 32ನೇ ವಿಧಿಯ ಅವಕಾಶ ಬಳಸಿಕೊಂಡು ಅರ್ಜಿದಾರರು ಕೋರಿದ್ದಾರೆ.
- ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಹಾಗೂ ಇತರೆ ಗುರುತಿನ ಚೀಟಿಗಳನ್ನು ಪಡೆಯಲು ಇತ್ತೀಚೆಗೆ ಆಧಾರ್ ಕಾರ್ಡ್ ಮೂಲ ದಾಖಲೆಯಾಗಿ ಬಳಕೆಯಾಗುತ್ತಿದೆ. ಆಧಾರ್ ನೀಡಲು ಅನುಸರಿಸುವ ಪರಿಶೀಲನಾ ಪ್ರಕ್ರಿಯೆ ದುರ್ಬಲವಾಗಿವೆ. ನುಸುಳುಕೋರರು ಸುಲಭವಾಗಿ ದಾಖಲೆ ತಿರುಚುತ್ತಿದ್ದಾರೆ ಹೀಗಾಗಿ ಕಠಿಣ ಮಾರ್ಗಸೂಚಿಗಳನ್ನು ರೂಪಿಸುವ ಅಗತ್ಯ ಇದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.
- ವಿದೇಶಿಗರು ಆಧಾರ್‌ಗಾಗಿ ವಿದೇಶಿ ವಿಭಾಗದಲ್ಲಿ ಅರ್ಜಿ ಸಲ್ಲಿಸುತ್ತಾರೆ. ಆದರೆ, ನುಸುಳುಕೋರರು ಭಾರತೀಯ ನಾಗರಿಕ' ವಿಭಾಗದಲ್ಲಿ ಅರ್ಜಿ ಸಲ್ಲಿಸಿ ಸುಲಭವಾಗಿ ಪಡೆಯುತ್ತಿದ್ದಾರೆ ಆನಂತರ ವಾಸ ದೃಢೀಕರಣ, ಚಾಲನಾ ಪರವಾನಗಿ ಸೇರಿ ಇತರೆ ದಾಖಲೆ ಪಡೆದು ಸುಲಭವಾಗಿ ಭಾರತೀಯ ಪ್ರಜೆ ಎನಿಸಿಕೊಳ್ಳುತ್ತಿದ್ದಾರೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.
- ವಿದೇಶಿಯರನ್ನು ಭಾರತೀಯ ಪ್ರಜೆಯಿಂದ ಬೇರ್ಪಡಿಸುವಲ್ಲಿ, ಆಧಾರ್ ಕಾಯ್-2026 ವಿಫಲವಾಗಿದೆಯೇ ಎಂಬ ಕಾನೂನಾತ್ಮಕ ಪ್ರಶ್ನೆಯನ್ನೂ ಈ ಅರ್ಜಿ ಎತ್ತಿದೆ.
- ಆಧಾರ್ ದುರ್ಬಳಕೆಯು ಕಲ್ಯಾಣ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಂಪನ್ಮೂಲ ಅನರ್ಹರ ಪಾಲಾಗುವುದನ್ನು ಹೆಚ್ಚಿಸಿದೆ ಎಂದು ಅರ್ಜಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.
- ಮತದಾರರ ಗುರುತಿನ ಚೀಟಿ, ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿ ಸಾಂವಿಧಾನಿಕ ಅವಕಾಶಗಳ ಬಗ್ಗೆಯೂ ಅರ್ಜಿಯಲ್ಲಿ ಗಮನಸೆಳೆಯಲಾಗಿದೆ. ಅಕ್ರಮ ನೋಂದಣಿಗಳು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನು ಹಾಳುಮಾಡುತ್ತವೆ ಎಂಬ ಆತಂಕ ಅರ್ಜಿಯಲ್ಲಿ ವ್ಯಕ್ತವಾಗಿದೆ.

## ❖ ಶಬರಿಮಲೆ: ಮಹಿಳೆಯರ ನಿಷೇಧಕ್ಕೆ ಬೆಂಬಲ

**ಸಂದರ್ಭ: ಕೇರಳದ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇಗುಲಕ್ಕೆ ಋತುಚಕ್ರದ ವಯಸ್ಸಿನ ಮಹಿಳೆಯರ ಪ್ರವೇಶದ ಮೇಲಿನ ನಿರ್ಬಂಧವನ್ನು ಗುರುವಾರ ಬೆಂಬಲಿಸಿದ ಕೇಂದ್ರ ಸರ್ಕಾರ, 2018ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪು ಪುರುಷರು ಶ್ರೇಷ್ಠರು ಮತ್ತು ಮಹಿಳೆಯರು ಕೆಳಮಟ್ಟದಲ್ಲಿ ದ್ದಾರೆ ಎಂಬ ಭಾವನೆಯನ್ನು ಆಧರಿಸಿದೆ ಎಂದು ತಿಳಿಸಿದೆ.**

- ಶಬರಿಮಲೆ ದೇವಸ್ಥಾನ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಮತ್ತು ವಿವಿಧ ಧರ್ಮಗಳ ಜನರ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಮುಂದೆ ಸರ್ಕಾರ ಈ ಹೇಳಿಕೆ ನೀಡಿದೆ.
- ಕೇಂದ್ರದ ಪರ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಈ ಕುರಿತು ಪೀಠಕ್ಕೆ ಲಿಖಿತ ಹೇಳಿಕೆ ಸಲ್ಲಿಸಿದರು ಅಲ್ಲದೆ, ಕೆಲ ದೇವಾಲಯಗಳಲ್ಲಿ ಪುರುಷರಿಗೆ ಪ್ರವೇಶ ನಿರಾಕರಣೆ ಇರುವು ದರ ಮಾಹಿತಿಯನ್ನೂ ತಿಳಿಸಿದರು.
- ಕೇರಳದ ಕೊಟ್ಟಂಕುಳಂಕರದ ಶ್ರೀ ಭಗವತಿ ಕ್ಷೇತ್ರಲ್ಲಿನ ಕೆಲ ನಂಬಿಕೆ ಆಚರಣೆಗಳ ಬಗ್ಗೆ, ಅವರು ಈ ವೇಳೆ ವಿವರಿಸಿದರು. 'ಈ ದೇಗುಲದಲ್ಲಿ ಪುರುಷರು ಮಹಿಳೆಯರಂತೆ ವೇಷ ಭೂಷಣ ತೊಡಬೇಕು ಎಂಬುದನ್ನು ನಾನು ಓದಿದ್ದೇನೆ. ಈ ದೇಗುಲ ಪ್ರವೇಶಕ್ಕೂ ಮುನ್ನ ಪುರುಷರು ಬ್ಯೂಟಿ ಪಾರ್ಲಗ್ರ ಹೋಗುತ್ತಾರೆ, ಅಲ್ಲಿ ಕುಟುಂಬದ ಮಹಿಳಾ ಸದಸ್ಯರು ಅವರಿಗೆ ಸೀರೆ ಉಡಲು ನೆರವಾಗುತ್ತಾರೆ' ಎಂದು ಅವರು ಉಲ್ಲೇಖಿಸಿದರು.
- ಈ ದೇಗುಲದಲ್ಲಿ ವಾರ್ಷಿಕವಾಗಿ ನಡೆಯುವ 'ಚಮಯವಿಳಕ್ಕು' ಉತ್ಸವಕ್ಕೆ ಪುರುಷರು ಮಹಿಳೆಯರಂತೆಯೇ ವೇಷ ಧರಿಸಬೇಕು. ಶತಮಾನಗಳ ಹಿಂದಿನಿಂದಲೂ ಈ ಸಂಪ್ರದಾಯ ಇಲ್ಲಿ ನಡೆದುಕೊಂಡು ಬಂದಿದೆ ಎಂದು ಅವರು ಹೇಳಿದರು.
- ಹೀಗಾಗಿ ಇದು ಪುರುಷ ಕೇಂದ್ರಿತ ಅಥವಾ ಮಹಿಳಾ ಕೇಂದ್ರಿದ ಧಾರ್ಮಿಕ ನಂಬಿಕೆಗಳ ಪ್ರಶ್ನೆಯಲ್ಲ. ಆದರೆ, ಶಬರಿಮಲೆ ಪ್ರಕರಣವನ್ನು ಮಹಿಳಾ ಕೇಂದ್ರಿತವಾಗಿಸಲಾಗಿದೆ ಎಂದು ಮೆಹ್ತಾ ಬೇಸರ ವ್ಯಕ್ತಪಡಿಸಿದರು.
- ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಎಂ.ಎಂ.ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಆಗಸ್ಟಿನ್ ಜಾರ್ಜ್ ಮಸೀಹ್, ಪ್ರಸನ್ನ ಬಿ. ವರಾಳೆ, ಆರ್. ಮಹದೇವನ್ ಮತ್ತು ಜಾಯ್‌ಲ್ಯಾ ಬಾಗ್ಚಿ ಅವರು ಈ ಪೀಠದಲ್ಲಿದ್ದಾರೆ.
- 2018ರಲ್ಲಿ ಐವರು ನ್ಯಾಯಮೂರ್ತಿ ಗಳ ಸಂವಿಧಾನ ಪೀಠವು 4:1ರ ಬಹುಮತದ ತೀರ್ಪಿನ ಮೂಲಕ ಕೇರಳದ ಶಬರಿಮಲೆ ಅಯ್ಯಪ್ಪ ದೇವಸ್ಥಾನಕ್ಕೆ 10ರಿಂದ 50 ವರ್ಷದೊಳಗಿನ ಮಹಿಳೆಯರು ಪ್ರವೇಶಿಸಲು ಇದ್ದ ನಿಷೇಧವನ್ನು ರದ್ದುಗೊಳಿಸಿತು. ಶತಮಾನಗಳಷ್ಟು ಹಳೆಯದಾದ ಈ ಹಿಂದೂ ಧಾರ್ಮಿಕ ಪದ್ಧತಿಯು ಕಾನೂನುಬಾಹಿರ ಮತ್ತು ಅಸಾಂವಿಧಾನಿಕ ಎಂದು ತೀರ್ಪು ನೀಡಿತು.
- ಬಳಿಕ 2019ರ ನವೆಂಬರ್ 14ರಂದು ಆಗಿನ ಸಿಜೆಐ ರಂಜನ್ ಗೊಗೊಯ್ ನೇತೃತ್ವದ ಮತ್ತೊಂದು ಐವರು ನ್ಯಾಯಮೂರ್ತಿಗಳ ಪೀಠವು 3:2ರ ಬಹುಮತದಿಂದ ವಿವಿಧ ಪೂಜಾ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯದ ವಿಷಯವನ್ನು ವಿಸ್ತೃತ ಪೀಠಕ್ಕೆ ಉಲ್ಲೇಖಿಸಿತ್ತು.

## ❖ ಆಯುಷ್ಮಾನ್: ರೂಟ್ ಕೆನಾಲ್ ಚಿಕಿತ್ಸೆ ಸೇರ್ಪಡೆ

**ಸಂದರ್ಭ: ರಾಜ್ಯದಲ್ಲಿ ಜಾರಿಯಲ್ಲಿರುವ 'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ-ಮುಖ್ಯಮಂತ್ರಿ ಯವರ ಆರೋಗ್ಯ ಕರ್ನಾಟಕ ಯೋಜನೆಯಡಿ' ರೂಟ್ ಕೆನಾಲ್ ಚಿಕಿತ್ಸೆಯನ್ನು ಸೇರ್ಪಡೆ ಮಾಡಲಾಗಿದೆ.**

- ಈ ಬಗ್ಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ರೂಟ್ ಕೆನಾಲ್ ಚಿಕಿತ್ಸೆಯು ಹುಳುಕು ಹಲ್ಲು ಅಥವಾ ಸೋಂಕಿನಿಂದ ಹಾನಿಗೊಳಗಾದ ಹಲ್ಲನ್ನು ಉಳಿಸಲು ಬಳಸುವ ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಬಾಯಿಯ ಆರೋಗ್ಯ ಸುಧಾರಣೆಗೆ ಇದು ಸಹಕಾರಿಯಾಗಿದೆ.
- ಅಧಿಕ ಚಿಕಿತ್ಸಾ ವೆಚ್ಚ ಮತ್ತು ಜಾಗೃತಿ ಕೊರತೆಯಿಂದಾಗಿ ಹೆಚ್ಚಿನ ಜನರು ರೂಟ್ ಕೆನಾಲ್ ಬದಲಿಗೆ, ದಂತ ತೆಗೆಯುವ ವಿಧಾನವನ್ನೇ ಆಯ್ಕೆ ಮಾಡಿ ಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಚಿಕಿತ್ಸೆಯನ್ನು ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ.

Dr. Rajkumar IAS/KAS Academy

- ಯೋಜನೆಯಡಿ ಮುಂಭಾಗದ ಮತ್ತು ಹಿಂಭಾಗದ ಹಲ್ಲುಗಳಿಗೆ ರೂಟ್ ಕೆನಾಲ್ ಚಿಕಿತ್ಸೆ ಒದಗಿಸಲಾಗುತ್ತದೆ. ಇವುಗಳನ್ನು ಸಂಕೀರ್ಣ ದ್ವಿತೀಯ ಕಾರ್ಯವಿಧಾನಗಳು (2ಬಿ) ಎಂದು ವರ್ಗೀಕರಿಸಲಾಗಿದೆ. ಚಿಕಿತ್ಸೆಗೆ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯ (ಸಿಜಿಎಚ್‌ಎಸ್) ದರಗಳನ್ನು ಅಳವಡಿಸಿಕೊಳ್ಳಲು ನಿರ್ದೇಶಿಸಲಾಗಿದೆ. ಅದರಂತೆ, ಮುಂಭಾಗದ ಹಲ್ಲುಗಳಿಗೆ ₹1,360 ಮತ್ತು ಹಿಂಭಾಗದ ಹಲ್ಲುಗಳಿಗೆ ₹2,040 ನಿಗದಿಪಡಿಸಲಾಗಿದೆ.
- ಯೋಜನೆಯಡಿ ಬಿಪಿಎಲ್ ಹಾಗೂ ಎಪಿಎಲ್ ಕುಟುಂಬದ ಸದಸ್ಯರು ಪ್ರಯೋಜನ ಪಡೆಯಬಹುದಾಗಿದೆ. ಯೋಜನೆಯ ಸೌಲಭ್ಯವನ್ನು ಸರ್ಕಾರವು 50 ಸಾವಿರ ಪ್ರಕರಣಗಳಿಗೆ ಅಥವಾ 5 ಕೋಟಿ ಆರ್ಥಿಕ ವೆಚ್ಚಕ್ಕೆ ಮಿತಿಗೊಳಿಸಿದೆ.

## ❖ ದೇಶದ ಆನ್‌ಲೈನ್ ರಿಟೇಲ್ ಮಾರುಕಟ್ಟೆ ಗಾತ್ರ ₹6 ಲಕ್ಷ ಕೋಟಿ

**ಸಂದರ್ಭ: ಕಳೆದ ವರ್ಷ ದೇಶದ ಆನ್‌ಲೈನ್ ರಿಟೇಲ್ ಮಾರುಕಟ್ಟೆಯ (ಇ-ಕಾಮರ್ಸ್) ಗಾತ್ರವು ₹6 ಲಕ್ಷ ಕೋಟಿಗಿಂತ ಹೆಚ್ಚಾಗಿದೆ. ಇದು 2024ಕ್ಕೆ ಹೋಲಿಸಿದರೆ ಶೇ 21ರಷ್ಟು ಅಧಿಕವಾಗಿದೆ.**

- ಕ್ವಿಕ್ ಕಾಮರ್ಸ್ ವಲಯದಲ್ಲಿ ಭಾರತವು, ಜಾಗತಿಕ ಮಟ್ಟದಲ್ಲಿ ನಾಯಕನ ಸ್ಥಾನದಲ್ಲಿದೆ ಎಂದು ಇ-ಕಾಮರ್ಸ್ ಕಂಪನಿ ಫ್ಲಿಪ್‌ಕಾರ್ಟ್ ಸಹಯೋಗದೊಂದಿಗೆ ಸಲಹಾ ಸಂಸ್ಥೆ ಬೈನ್ ಆ್ಯಂಡ್ ಕಂಪನಿ ಸಿದ್ಧಪಡಿಸಿರುವ ವರದಿ ತಿಳಿಸಿದೆ.
- 2030ರ ವೇಳೆಗೆ ದೇಶದ ಆನ್‌ಲೈನ್ ರಿಟೇಲ್ ಮಾರುಕಟ್ಟೆಯ ಗಾತ್ರವು ₹16 ಲಕ್ಷ ಕೋಟಿಯಷ್ಟಾಗುವ ನಿರೀಕ್ಷೆ ಇದ್ದು, ವಾರ್ಷಿಕ ಶೇ 20ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ.
- 2025ರಲ್ಲಿ ಆನ್‌ಲೈನ್ ರಿಟೇಲ್ ಮಾರುಕಟ್ಟೆಯ ಒಟ್ಟು ಮಾರಾಟದ ಮೌಲ್ಯದಲ್ಲಿ ಕ್ವಿಕ್ ಕಾಮರ್ಸ್ ವಲಯವು ₹1 ಲಕ್ಷ ಕೋಟಿಯನ್ನು ಪಾಲು ಹೊಂದಿದೆ. ಇದು 2030ರ ವೇಳೆಗೆ ಇದು ₹6.48 ಲಕ್ಷ ಕೋಟಿಯಷ್ಟಾಗುವ ನಿರೀಕ್ಷೆಯಿದ್ದು. ಒಟ್ಟು ಮಾರುಕಟ್ಟೆಯ ಗಾತ್ರದ ಶೇ 45ರಿಂದ ಶೇ 50ರಷ್ಟಾಗಲಿದೆ ಎಂದು ತಿಳಿಸಿದೆ.
- 2022ರಿಂದ 2024ರವರೆಗೆ ಕುಟುಂಬಗಳು ಸರಕು ಮತ್ತು ಸೇವೆಗಳಿಗೆ ಖರ್ಚು ಮಾಡುವ ಪ್ರಮಾಣ ವಾರ್ಷಿಕ ಶೇ 8ರಷ್ಟು ಬೆಳವಣಿಗೆ ಕಂಡಿತ್ತು. ಇದು 2025ರ ವೇಳೆಗೆ ಈ 10.5ಕ್ಕೆ ಏರಿಕೆಯಾಗಿದೆ. ಜಿಎಸ್‌ಟಿ ದರ ಪರಿಷ್ಕರಣೆ, ವೈಯಕ್ತಿಕ ಆದಾಯ ತೆರಿಗೆ ವಿನಾಯಿತಿ, ಹಣದುಬ್ಬರ ಇಳಿಕೆ ಮತ್ತು ಕಡಿಮೆ ಬಡ್ಡಿ ದರದ ಸಾಲವು ಕುಟುಂಬಗಳು ಖರ್ಚು ಮಾಡುವ ಪ್ರಮಾಣವನ್ನು ಹೆಚ್ಚಿಸಿವೆ ಎಂದು ತಿಳಿಸಿದೆ.
- ಕಳೆದ ಐದು ವರ್ಷದಲ್ಲಿ ದೇಶದ ಆನ್‌ಲೈನ್ ಶಾಪಿಂಗ್ ಮಾರುಕಟ್ಟೆಯ ಗಾತ್ರ ಎರಡು ಪಟ್ಟಿಗಿಂತಲೂ ಹೆಚ್ಚು ಬೆಳವಣಿಗೆ ಕಂಡಿದೆ.
- ದೇಶದ ಜಿಡಿಪಿ ಗಾತ್ರಕ್ಕೆ ಹೋಲಿಸಿದರೆ ಆನ್‌ಲೈನ್ ರಿಟೇಲ್ ಮಾರುಕಟ್ಟೆಯು ಶೇ1.6ರಷ್ಟಿದೆ ಆದರೆ ಚೀನಾದಲ್ಲಿ ಶೇ 14ರು ಮತ್ತು ಇಂಡೊನೇಷ್ಯಾ ಶೇ 4 5ರಷ್ಟಿದೆ ಎಂದು ತಿಳಿಸಿದೆ.

## ❖ ಇ.ವಿ ವಾಹನ ಮಾರುಕಟ್ಟೆ ಪ್ರವೇಶಿಸಿದ ರಾಯಲ್ ಎನ್‌ಫೀಲ್ಡ್

**ಸಂದರ್ಭ: ಐಷರ್ ಮೋಟರ್ಸ್ ಸಮೂಹಕ್ಕೆ ಸೇರಿರುವ ರಾಯಲ್ ಎನ್‌ಫೀಲ್ಡ್, ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ಮಾರುಕಟ್ಟೆಯನ್ನು ಗುರುವಾರ ಪ್ರವೇಶಿಸಿದೆ. ತನ್ನ ಮೊದಲ ಇ.ವಿ. ದ್ವಿಚಕ್ರ ವಾಹನ 'ಫ್ಲೈಯಿಂದ ಫ್ರೀ ಸಿ6' ವಾಹನವನ್ನು ಬಿಡುಗಡೆ ಮಾಡಿದೆ.**

- ಇದರ ಎಕ್ಸ್ ಷೋರೂಂ ಬೆಲೆಯು ₹2.79 ಲಕ್ಷ ಆದರೆ, ಬ್ಯಾಟರಿಯನ್ನು ಒಂದು ಸೇವೆಯ ರೂಪದಲ್ಲಿ ಪಡೆದರೆ ಈ ವಾಹನವು ₹1.99 ಲಕ್ಷಕ್ಕೆ ಸಿಗುತ್ತದೆ ಎಂದು ಐಷರ್ ಮೋಟರ್ಸ್ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.
- ಕಂಪನಿಯು ಈ ವಾಹನವನ್ನು ಗ್ರಾಹಕರಿಗೆ ವಿತರಿಸುವ ಕೆಲಸವನ್ನು ಮೇ ತಿಂಗಳ ಕೊನೆಯ ಭಾಗದಿಂದ ಶುರು ಮಾಡಲಿದೆ ವಾಹನವು ಗಂಟೆಗೆ ಗರಿಷ್ಠ 115 ಕಿ.ಮೀ. ವೇಗದಲ್ಲಿ ಸಾಗಬಲ್ಲದು

Dr. Rajkumar IAS/KAS Academy

## ❖ ಫೈನಲ್ ಗೆದ್ದ ಮೀನಾಕ್ಷಿ, ಪ್ರೀತಿ, ಪ್ರಿಯಾ, ಅರುಂಧತಿ: ಬಾಕ್ಸಿಂಗ್: ಒಂದೇ ದಿನ ನಾಲ್ಕು ಚಿನ್ನ

**ಸಂದರ್ಭ: ಹಾಲಿ ವಿಶ್ವ ಚಾಂಪಿಯನ್ ಮೀನಾಕ್ಷಿ ಹೂಡಾ, ಪ್ರೀತಿ ಪವಾರ್ ಸೇರಿದಂತೆ ಭಾರತದ ನಾಲ್ವರು ಮಹಿಳೆಯರು ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು.**



ಅರುಂಧತಿ ಪ್ರೀತಿ ಪ್ರಿಯಾ

- ಮೀನಾಕ್ಷಿ (48 ಕೆ.ಜಿ.) ಮತ್ತು ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ಪ್ರೀತಿ (54 ಕೆ.ಜಿ) ಜೊತೆಗೆ ಪ್ರಿಯಾ ಘಂಗಾಸ್ (60 ಕೆ.ಜಿ.) ಮತ್ತು ವಿಶ್ವ ಬಾಕ್ಸಿಂಗ್ ಕಪ್ ಸ್ವರ್ಣ ವಿಜೇತೆ ಅರುಂಧತಿ ಚೌಧರಿ (70 ಕೆ.ಜಿ.) ಅವರೂ ಬಂಗಾರದ ಪದಕಕ್ಕೆ ಕೊರಳೊಡ್ಡಿದರು.
- ಆದರೆ ಭಾರತಕ್ಕೆ ದೊಡ್ಡ ಹಿನ್ನಡೆಯಾಗಿದ್ದು ಮಹಿಳೆಯರ 57 ಕೆ.ಜಿ. ವಿಭಾಗದ ಫೈನಲ್‌ನಲ್ಲಿ. ಈ ಸೆಣಸಾಟದಲ್ಲಿ ಹಾಲಿ ವಿಶ್ವ ಚಾಂಪಿಯನ್ ಜೈಸ್ಮಿನ್ ಲಂಬೋರಿಯಾ ಅವರು 0-5 ರಿಂದ ಎರಡು ಬಾರಿಯ ವಿಶ್ವ ಚಾಂಪಿಯನ್ ಪುನವೀ ರುಕ್ರೋಸ್ (ಥಾಯ್ಲೆಂಡ್) ಅವರಿಗೆ ಮಣಿದರು.
- ಭಾರತದ ಅಲ್ಫಿಯಾ ಪಠಾಣ್ 80 ಕೆ.ಜಿ + ವಿಭಾಗದಲ್ಲಿ ರನ್ನರ್ ಅಪ್ ಆದರು. ಅವರು ಫೈನಲ್‌ನಲ್ಲಿ 0-5 ರಿಂದ ಕಜಾಕಸ್ತಾನದ ದೀನಾ ಇಸ್ಲಾಮ್‌ಬೆಕೊವಾ ಅವರಿಗೆ ಮಣಿದರು.
- ಭಾರತದ ಮಹಿಳೆಯರು ಒಟ್ಟು 10 ಪದಕಗಳನ್ನು ಗೆದ್ದು ಪ್ರಭಾವಶಾಲಿ ಪ್ರದರ್ಶನ ನೀಡಿದರು. ಇವುಗಳಲ್ಲಿ ನಾಲ್ಕು ಚಿನ್ನ. ಎರಡು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳಿವೆ.
- ಆದರೆ ಕೆಲವು ವಿಭಾಗಗಳಲ್ಲಿ 2-3 ಸ್ಪರ್ಧಿಗಳಿದ್ದ ಕಾರಣ, ಲವಿನಾ ಬೊರ್ಗೊಹೈನ್ (75 ಕೆ ಜಿ), ಪೂಜಾ ರಾಣಿ (80 ಕೆ.ಜಿ) ಮತ್ತು ಅಗ್ನಿಯಾ ಭಾಗವಹಿಸಿದ ಮಾತ್ರಕ್ಕೆ ಪದಕ ಪಡೆದರು.
- ಮೀನಾಕ್ಷಿ ಅವರು 5-0 ಯಿಂದ ಮಂಗೋಲಿಯಾದ ನೊಮುನ್ನರಿ ಎನ್-ಅಮ್ರಲನ್ ಅವರನ್ನು ಸೋಲಿಸಿ ಭಾರತದ ಚಿನ್ನದ ಬೇಟೆ ಆರಂಭಿಸಿದರು ಪ್ರೀತಿ ಮೂರು ಬಾರಿಯ ವಿಶ್ವ ಚಾಂಪಿಯನ್ ಹುವಾಂಗ್ ಸಿಯಾವೊವೆನ್ (ತೈವಾನ್) ಅವರನ್ನು 5-0 ಸರ್ವಾನುಮತದ ತೀರ್ಪಿನಲ್ಲಿ ಸೋಲಿಸಿದರು.
- ಪ್ರಿಯಾ 3-0 ಯಿಂದ ಉತ್ತರ ಕೊರಿಯಾದ ವೊನ್ ಉನ್-ಗ್ಯಾಂಗ್ ಅವರನ್ನು ಮಣಿಸಿದರೆ ಆರುಂಧತಿ ಫೈನಲ್‌ನಲ್ಲಿ 4-1 ರಿಂದ ಕಜಾಕಸ್ತಾನದ ಬಕಿಟ್ ಸೀದಿಶ್ ಅವರನ್ನು ಮಣಿಸಿದರು.

## ❖ ಕುಸ್ತಿ: ಹನ್ಸಿಕಾ, ನೇಹಾಗೆ ಕಂಚು


- ಹನ್ಸಿಕಾ ಲಂಬಾ ಮತ್ತು ನೇಹಾ ಅವರು ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ 55 ಕೆ.ಜಿ. ಮತ್ತು 59 ಕೆ.ಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು.
- ಎರಡು ಬಾರಿಯ ರಾಷ್ಟ್ರೀಯ ಚಾಂಪಿಯನ್ ಮೀನಾಕ್ಷಿ ಗೋಯತ್ ಅವರು ಸೋಲಿನ ಸುಳಿಯಿಂದ ಚೇತರಿಸಿ ದಕ್ಷಿಣ ಕೊರಿಯಾದ ಸಿಯೊಂಗ್ ಪಾರ್ಕ್ ವಿರುದ್ಧ ಗೆದ್ದು 53 ಕೆ.ಜಿ. ವಿಭಾಗದಲ್ಲಿ ಫೈನಲ್‌ಗೆ ಲಗ್ಗೆಯಿಟ್ಟರು.
- 55 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ 19 ವರ್ಷ ವಯಸ್ಸಿನ ಹನ್ಸಿಕಾ, ಆತಿಥೇಯ ಕಿರ್ಗಿಸ್ತಾನದ ಅರುಕ ಕದಿರ್ಬೆಕ್ ಕಿಝಿ ಅವರನ್ನು 6-1 ರಿಂದ ಮಣಿಸಿದರು.


Dr.Rajkumar IAS/KAS Academy

## ❖ ಮತ ಪತ್ರ ಬಳಕೆ: ಮಸೂದೆಗೆ ರಾಜ್ಯಪಾಲರ ತಡೆ

**ಸಂದರ್ಭ: ಬೆಂಗಳೂರು ಬಜೆಟ್ ಅಧಿವೇಶನ ದಲ್ಲಿ ಮಂಡನೆಯಾಗಿದ್ದ 11 ಮಸೂದೆಗಳ ಪೈಕಿ, ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರದ ಬದಲು ಮತ ಪತ್ರ ಬಳಕೆಗೆ ಅವಕಾಶ ಕಲ್ಪಿಸುವ ಮಸೂದೆಯನ್ನು ಬಿಟ್ಟು, ಉಳಿದವುಗಳಿಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ ಚುನಾವಣೆಗಳಲ್ಲಿ ಮತ ಪತ್ರ ಬಳಸುವುದಕ್ಕೆ ಸಂಬಂಧಿಸಿದ 'ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ 2026' ರಾಜ್ಯಪಾಲರ ಪರಿಶೀಲನೆ ಹಂತದಲ್ಲಿದೆ ಎಂದು ಲೋಕಭವನದ ಮೂಲಗಳು ತಿಳಿಸಿವೆ.**

- ಒಪ್ಪಿಗೆ ಪಡೆದ ಮಸೂದೆಗಳು ಕರ್ನಾಟಕ ಪೊಲೀಸ್ ಮಸೂದೆ, ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ, ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವೆ) ಮಸೂದೆ.
- ಕರ್ನಾಟಕ ವೃತ್ತಿಗಳ, ಕಸುಬುಗಳ, ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಮಸೂದೆ, ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿ (ರಕ್ಷಣೆ ಮತ್ತು ಸಕ್ರಮಾತಿ) ಮಸೂದೆ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಮಸೂದೆ, ಕರ್ನಾಟಕ ಧನ ವಿನಿಯೋಗ ಮಸೂದೆ. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ತಿದ್ದುಪಡಿ ಮಸೂದೆ.



ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವು ಜಾಗತಿಕ ಮಟ್ಟದಲ್ಲಿ ಇಂಧನ ಬಿಕ್ಕಟ್ಟನ್ನು ಸೃಷ್ಟಿಸಿದೆ. ಈ ಸಂಘರ್ಷವು ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲ ವ್ಯಾಪಾರವನ್ನು ಅಸ್ತವ್ಯಸ್ತಗೊಳಿಸಿದೆ. ಭವಿಷ್ಯದಲ್ಲಿಯೂ ಇಂಥ ಸ್ಥಿತಿ ಮತ್ತೆ ಮತ್ತೆ ಎದುರಾಗುವ ಸಂಭವವಿದೆ. ಹೀಗಾಗಿ ತೈಲ ಮತ್ತು ಅನಿಲಕ್ಕೆ ಪರ್ಯಾಯಗಳನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಗಿದೆ. ಈ ವಿಚಾರದಲ್ಲಿ ಚೀನಾ ಗಮನಾರ್ಹ ಸಾಧನೆ ಮಾಡಿದ್ದರೆ, ಪಾಕಿಸ್ತಾನವೂ ಒಂದಷ್ಟು ಕೆಲಸ ಮಾಡಿದೆ. ಪವನ, ಸೌರಶಕ್ತಿ, ವಿದ್ಯುತ್‌ನಂಥ ಶುದ್ಧ ಇಂಧನದ ಪರ್ಯಾಯಗಳನ್ನು ಹೆಚ್ಚು ಬಳಸುವ ದಿಸೆಯಲ್ಲಿ ಹೆಜ್ಜೆ ಇಡಲು ಇದು ಸಕಾಲ

# ಜಗತ್ತನ್ನು ಬದಲಿಸಲಿರುವ ಇಂಧನ ಬಿಕ್ಕಟ್ಟು

## ಅಮೆರಿಕ–ಇಸ್ರೇಲ್ ಮತ್ತು ಇರಾನ್ ಯುದ್ಧದಿಂದ ಜಾಗತಿಕ ಮಾರುಕಟ್ಟೆಯಲ್ಲಿ ತೈಲ, ಅನಿಲ ಪೂರೈಕೆ ಅಸ್ತವ್ಯಸ್ತ

• ಜೊನಾಥನ್ ಮಿಂಗಲ್

ಶ್ರೀಲಂಕಾ ಮತ್ತು ಮ್ಯಾನ್ಮಾರ್ ಇಂಧನವನ್ನು ಈಗ ಪಡಿತರದ ರೀತಿ ವಿತರಿಸಲು ಆರಂಭಿಸಿವೆ. ಪೆಟ್ರೋಲ್ (ಗ್ಯಾಸೋಲಿನ್) ಮತ್ತು ವಿದ್ಯುತ್ ಉಳಿಸುವುದಕ್ಕಾಗಿ ಫಿಲಿಪ್ಪೀನ್ಸ್ ವಾರದಲ್ಲಿ ನಾಲ್ಕು ದಿನ ಮಾತ್ರ ಕೆಲಸ ಮಾಡುವ ನಿಯಮವನ್ನು ಜಾರಿಗೆ ತಂದಿದೆ. ಮನೆಗಳು ಮತ್ತು ಉದ್ದಿಮೆಗಳಿಗೆ ವಿದ್ಯುತ್ ಪೂರೈಸುವುದಕ್ಕಾಗಿ ಬಾಂಗ್ಲಾದೇಶವು ತನ್ನ ವಿಶ್ವವಿದ್ಯಾಲಯಗಳನ್ನು ತಾತ್ಕಾಲಿಕವಾಗಿ ಮುಚ್ಚಿದೆ. ಭಾರತದಾದ್ಯಂತ ಕುಟುಂಬಗಳು ಮತ್ತು ರೆಸ್ಟೋರೆಂಟ್‌ಗಳು ಅನಿಲ ಸಿಗದೆ ಇರುವ ಕಾರಣದಿಂದ ಸೌದೆ, ಉರುವಲನ್ನು ಅಡುಗೆಗೆ ಬಳಸುತ್ತಿವೆ. ವಿಮಾನಯಾನ ಸಂಸ್ಥೆಗಳು ವಿಮಾನಗಳ ಹಾರಾಟವನ್ನು ರದ್ದುಗೊಳಿಸುತ್ತಿವೆ.

ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವೆ ನಡೆದ ಯುದ್ಧದ ಮೊದಲ ಹಂತದಲ್ಲಿ ಸೃಷ್ಟಿಯಾಗಿರುವ ಇಂಧನ ಬಿಕ್ಕಟ್ಟು ಜಾಗತಿಕ ಮಟ್ಟದಲ್ಲಿ ತೆರೆದಿಟ್ಟಿರುವ ಸಂಕಟಕರ ಸನ್ನಿವೇಶ ಇದು. ಭವಿಷ್ಯದಲ್ಲಿ ಈ ಬಿಕ್ಕಟ್ಟು ಇನ್ನಷ್ಟು ತೀವ್ರವಾಗಿರಲಿದೆ.

ಅಂತರರಾಷ್ಟ್ರೀಯ ಇಂಧನ ಸಂಸ್ಥೆಯ (ಇಂಟರ್‌ನ್ಯಾಷನಲ್ ಎನರ್ಜಿ ಏಜೆನ್ಸಿ–ಐಇಎ) ಮುಖ್ಯಸ್ಥ ಫಾತ್ಹೀ ಬಿರೋಲ್ ಅವರು ಈ ಬಿಕ್ಕಟ್ಟನ್ನು, 'ಪ್ರಪಂಚದ ಇತಿಹಾಸದಲ್ಲೇ ಜಾಗತಿಕ ಇಂಧನ ಭದ್ರತೆಗೆ ಒಡ್ಡಿರುವ ಅತ್ಯಂತ ದೊಡ್ಡ ಬೆದರಿಕೆ' ಎಂದು ಕರೆದಿದ್ದಾರೆ. 1970ರ ದಶಕದ ತೈಲ ಬಿಕ್ಕಟ್ಟಿಗಿಂತಲೂ, ಕೋವಿಡ್ ಸಾಂಕ್ರಾಮಿಕ ಅಥವಾ 2022ರಲ್ಲಿ ಉಕ್ರೇನ್ ಮೇಲೆ ರಷ್ಯಾ ನಡೆಸಿದ ಅತಿಕ್ರಮಣದ ಸಂದರ್ಭದಲ್ಲಿ ಕಂಡುಬಂದಿದ್ದಕ್ಕಿಂತಲೂ ಹೆಚ್ಚು ತೀವ್ರವಾದ ಬಿಕ್ಕಟ್ಟು ಇದು ಎಂಬುದು ಅವರ ಪ್ರತಿಪಾದನೆ.

ಈಗಿನ ಸಂಘರ್ಷವು ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲ ವ್ಯಾಪಾರವನ್ನೇ ಅಸ್ತವ್ಯಸ್ತಗೊಳಿಸಿದೆ. ಇಂಧನ ಪೂರೈಕೆಯಲ್ಲಿ ಉಂಟಾಗಿರುವ ಅಂತರ/ಕೊರತೆಯನ್ನು ತುಂಬಲು ತಕ್ಷಣಕ್ಕೆ ಮಾರ್ಗಗಳೂ ಇಲ್ಲದಂತಾಗಿವೆ.

### ಶುದ್ಧ ಇಂಧನದ ಕಡೆ ಮುಖ

ನೈಸರ್ಗಿಕ ಅನಿಲದ ಬೆಲೆ ಹೆಚ್ಚಾಗಿದೆ.

ಇದರಿಂದಾಗಿ ಎದುರಾಗಿರುವ ಪರಿಸ್ಥಿತಿಯನ್ನು ನಿಭಾಯಿಸಲು ಭಾರತ, ಇಂಡೊನೇಷ್ಯಾ ಮತ್ತು ವಿಯೆಟ್ನಾಂನಂತಹ ರಾಷ್ಟ್ರಗಳು ಕಲ್ಲಿದ್ದಲನ್ನು ಹೆಚ್ಚು ಬಳಸುತ್ತಿವೆ. ಈ ಇಂಧನ ಬಿಕ್ಕಟ್ಟು ನೀಡಿರುವ ಆಘಾತವು ದೀರ್ಘ ಅವಧಿಯಲ್ಲಿ ಏಷ್ಯಾ ಮತ್ತು ಯುರೋಪ್ ಖಂಡಗಳ ದೇಶಗಳು ಶುದ್ಧ ಇಂಧನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಗೆ ವೇಗ ನೀಡಲಿವೆ.

ತೈಲ ಮತ್ತು ಅನಿಲಕ್ಕೆ ಪರ್ಯಾಯವಾಗಿರುವ ಸೌರ ಫಲಕಗಳು, ಗಾಳಿ ಟರ್ಬೈನ್‌ಗಳು, ಎಲೆಕ್ಟ್ರಿಕ್ ವಾಹನಗಳು ಮತ್ತು ಬ್ಯಾಟರಿಗಳು ಕಡಿಮೆ ಬೆಲೆಗೆ ಹಾಗೂ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವಾಗ ಉಂಟಾಗಿರುವ ಮೊದಲ ತೈಲ ಬಿಕ್ಕಟ್ಟು ಇದು.

ಇಂಧನದ ಪೂರೈಕೆಯಲ್ಲಿ ಆಗಿರುವ ವ್ಯತ್ಯಯವು ಈಗಾಗಲೇ ಗ್ರಾಹಕರು ಶುದ್ಧ ಇಂಧನ ತಂತ್ರಜ್ಞಾನಗಳನ್ನು ಅಪ್ಪಿಕೊಳ್ಳುವಂತೆ ಮಾಡಿದೆ. ಫಿಲಿಪ್ಪೀನ್ಸ್ ಸರ್ಕಾರ ಮಾರ್ಚ್ 24ರಂದು ರಾಷ್ಟ್ರೀಯ ಇಂಧನ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ ಕೂಡಲೇ, ಮನಿಲಾದ ಗ್ರಾಹಕರು ಎಲೆಕ್ಟ್ರಿಕ್ ಕಾರುಗಳನ್ನು ಖರೀದಿಸಲು ಚೀನಾದ ಕಾರು ತಯಾರಿಕಾ ಕಂಪನಿ ಬಿವೈಡಿಯ ಶೋರೂಂಗಳ ಮುಂದೆ ಜಮಾಯಿಸಿದರು. ಜರ್ಮನಿಯಲ್ಲಿ ಗ್ರಾಹಕರು ಸೌರಶಕ್ತಿಯ ಉಪಕರಣಗಳ ಅಳವಡಿಕೆಗೆ ಆಸಕ್ತಿ ತೋರಿದ್ದು, ಅಲ್ಲಿ ಸೌರಶಕ್ತಿ ಉಪಕರಣಗಳ ಮಾರಾಟಗಾರರಿಗೆ ವ್ಯಾಪಾರ ಮತ್ತು ಅವುಗಳನ್ನು ಅಳವಡಿಸುವವರಿಗೂ ಕೆಲಸ ಹೆಚ್ಚಾಯಿತು. ಬ್ರಿಟನ್‌ನಲ್ಲಿ ಹೀಟ್ ಪಂಪ್‌ಗಳ ಅಳವಡಿಕೆ ಹೆಚ್ಚಾಗಿದೆ. ಪಾಕಿಸ್ತಾನದಲ್ಲಿ ಎಲೆಕ್ಟ್ರಿಕ್ ರಿಕ್ಷಾಗಳ ಮಾರಾಟ ಏರಿಕೆ ಕಂಡಿದೆ. ಭಾರತದಲ್ಲಿ ಇ–ಕಾಮರ್ಸ್ ವೇದಿಕೆಗಳಲ್ಲಿ ಇಂಡಕ್ಷನ್ ಸ್ಟೌಗಳ ಮಾರಾಟ ಜಾಸ್ತಿಯಾಗಿದೆ. ವಿಯೆಟ್ನಾಂನಲ್ಲಿ ದೇಶದ ಅತ್ಯಂತ ದೊಡ್ಡ ದ್ರವೀಕೃತ ನೈಸರ್ಗಿಕ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಹೊರಟಿದ್ದ ಉದ್ದಿಮೆಗಳ ಸಮೂಹವೊಂದು ಈಗ ಆ ಯೋಜನೆಯನ್ನು ಕೈಬಿಟ್ಟು, ಅದರ ಬದಲಿಗೆ ನವೀಕರಿಸಬಹುದಾದ ಇಂಧನ ಆಧಾರಿತ ವಿದ್ಯುತ್ ಉತ್ಪಾದನಾ ಘಟಕ ಮತ್ತು ವಿದ್ಯುತ್ ಅನ್ನು ಬ್ಯಾಟರಿಗಳಲ್ಲಿ ಸಂಗ್ರಹಿಸುವ ಯೋಜನೆ ಕೈಗೆತ್ತಿಕೊಳ್ಳಲು ಯೋಚಿಸುತ್ತಿದೆ.

ಯುದ್ಧ ಆರಂಭಗೊಂಡ ನಂತರ ಚೀನಾದ ಮೂರು ಬಹುದೊಡ್ಡ ಬ್ಯಾಟರಿ ಕಂಪನಿಗಳ ಷೇರು ಮಾರುಕಟ್ಟೆ ಮೌಲ್ಯ ತಲಾ ಅಂದಾಜು ಶೇ 20ರಷ್ಟು ಅಥವಾ ಒಟ್ಟಾಗಿ 7,000 ಕೋಟಿ ಡಾಲರ್‌ಗಳಷ್ಟು ಹೆಚ್ಚಾಗಿದೆ.

ಶುದ್ಧ ಇಂಧನದತ್ತ ತ್ವರಿತವಾಗಿ ಮುಖಮಾಡಬೇಕು ಎಂದು ಬಯಸುವ ಸರ್ಕಾರಗಳಿಗೆ ಪಾಕಿಸ್ತಾನದ ಇತ್ತೀಚಿನ ಇತಿಹಾಸದಲ್ಲಿ ಹಲವು ಪಾಠಗಳು ಸಿಗಬಹುದು. 2022ರಲ್ಲಿ ರಷ್ಯಾ ಉಕ್ರೇನ್ ಮೇಲೆ ಯುದ್ಧ ಸಾರಿದಾಗ ಪಾಕಿಸ್ತಾನವು ಇಂಧನದ ಆಘಾತಕ್ಕೆ ಒಳಗಾಗಿತ್ತು. ಅನಿಲದ ಬೆಲೆ ದಿಢೀರ್ ಹೆಚ್ಚಳವಾದಾಗ ಖರೀದಿ ಮಾಡುವ ಸಾಮರ್ಥ್ಯ ಅದಕ್ಕಿರಲಿಲ್ಲ. ಪಾಕಿಸ್ತಾನಕ್ಕೆ ಬರಬೇಕಾದ, ಹಡಗುಗಳಲ್ಲಿ ತುಂಬಿದ್ದ ಅನಿಲವನ್ನು ಯುರೋಪಿನ ಶ್ರೀಮಂತರು ಖರೀದಿಸಿದರು.

ಆದರೆ, ಅದೇ ಹೊತ್ತಿನಲ್ಲಿ ಅಗ್ಗದ ಸೌರ ಫಲಕಗಳು ಚೀನಾದಿಂದ ಭರಪೂರವಾಗಿ ಪೂರೈಕೆಯಾದವು. ಇದು ಪಾಕಿಸ್ತಾನದ ಇಂಧನ ವ್ಯವಸ್ಥೆಯನ್ನೇ ಬದಲಾಯಿಸಿತು. ಈಗ ಉಂಟಾಗಿರುವ ದ್ರವೀಕೃತ ನೈಸರ್ಗಿಕ ಅನಿಲ ಕೊರತೆಯ ಸವಾಲನ್ನು ಎದುರಿಸಲೂ ಅದಕ್ಕೆ ಇದರಿಂದ ಸಾಧ್ಯವಾಗಿದೆ. ಪಾಕಿಸ್ತಾನ ಉತ್ಪಾದಿಸುವ ಒಟ್ಟು ವಿದ್ಯುತ್‌ನಲ್ಲಿ ಸುಮಾರು ಶೇ 30ರಷ್ಟನ್ನು ಸೂರ್ಯನ ಬೆಳಕಿನಿಂದ ಉತ್ಪಾದಿಸುತ್ತಿದೆ. 2020ಕ್ಕೆ ಹೋಲಿಸಿದರೆ ಇದರ ಪ್ರಮಾಣ ಶೇ 3ರಷ್ಟು ಹೆಚ್ಚಾಗಿದೆ. ಪಾಕಿಸ್ತಾನದಲ್ಲಿ ಸೌರಶಕ್ತಿಯ ಬಳಕೆಯಲ್ಲಿ ಆಗುತ್ತಿರುವ ಹೆಚ್ಚಳವು ಈ ವರ್ಷ ಅದು 700 ಕೋಟಿ ಡಾಲರ್ ಮೌಲ್ಯದ ಪಳೆಯುಳಿಕೆ ಇಂಧನ ಆಮದು ಮಾಡಿಕೊಳ್ಳುವುದನ್ನು ತಪ್ಪಿಸಲಿದೆ. ಇದು ಪಾಕಿಸ್ತಾನಿಯರಿಗೆ ಇಂಧನದ ಕೊರತೆಯಾಗುವುದರಿಂದ ರಕ್ಷಣೆ ನೀಡಲಿದೆ ಎಂದು 'ಸೆಂಟರ್ ಫಾರ್ ರಿಸರ್ಚ್ ಆ್ಯಂಡ್ ಕ್ಲೀನ್ ಏರ್' ಅಂದಾಜಿಸಿದೆ.

'ಸೌರಶಕ್ತಿಯನ್ನು ಗರಿಷ್ಠವಾಗಿ ಬಳಸಿಕೊಳ್ಳಲು ಆರಂಭಿಸಿದರೆ ಕೆಲವೇ ವರ್ಷಗಳಲ್ಲಿ ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯ' ಎಂಬುದು ರಿಸರ್ಚ್ ಸೆಂಟರ್‌ನ ಮುಖ್ಯ ವಿಶ್ಲೇಷಕರಾದ ಲೌರಿ ಮಿಲ್ಲಿವಿರ್ತಾ ಅವರ ಅಭಿಪ್ರಾಯ.

### ಚೀನಾ ಸಾಧನೆ

ಇಂಧನ ಭದ್ರತೆಯನ್ನು ಸಾಧಿಸುವುದು ಈ ಕ್ಷಣದ ತುರ್ತಾಗಿದೆ. ಅದರ ಅರ್ಥ ಹೆಚ್ಚು ಗಾಳಿ, ಸೌರಶಕ್ತಿ ಮತ್ತು ಬ್ಯಾಟರಿಗಳನ್ನು ಅಳವಡಿಸುವುದಲ್ಲ; ದೇಶೀಯ ಶುದ್ಧ ಇಂಧನ ಮೂಲಗಳ ಉತ್ಪಾದನಾ ಸಾಮರ್ಥ್ಯ ಬೆಳೆಸುವುದು ಮತ್ತು ಮನೆಗಳಲ್ಲಿ ಮತ್ತು ಸಾರಿಗೆಗೆ ವಿದ್ಯುತ್ ಉಪಕರಣ ಮತ್ತು ತಂತ್ರಜ್ಞಾನವನ್ನು ಬಳಸುವುದು. ಇಂಧನ ಸ್ವಾಯತ್ತೆಯು ಹೆಚ್ಚಾದಂತೆ, ಅಧಿಕ ರಾಷ್ಟ್ರಗಳು ಆರೋಗ್ಯ ಕೆಡಿಸುವ ವಾಯುಮಾಲಿನ್ಯ ಮತ್ತು ವಾತಾವರಣದ ಉಷ್ಣತೆ ಹೆಚ್ಚಿಸುವ ಹೊರಸೂಸುವಿಕೆಗಳನ್ನು ನಿರ್ಣಾಯಕವಾಗಿ ತಡೆಯಲು ಸಾಧ್ಯ.

ಈ ವಿಚಾರದಲ್ಲಿ ಚೀನಾ ಹೆಚ್ಚು ಪ್ರಗತಿ ಸಾಧಿಸಿದೆ; ಕಳೆದ ದಶಕದಲ್ಲಿ ಅದು ತನ್ನ ಸಾರಿಗೆ ಮತ್ತು ಕೈಗಾರಿಕಾ ವಲಯದ ಹೆಚ್ಚಿನ ಭಾಗವನ್ನು ವಿದ್ಯುತ್ ಆಧಾರಿತವಾಗಿ ರೂಪಿಸಿತು ಮತ್ತು ತನ್ನ ತೈಲ ಬಳಕೆಯಲ್ಲಿ ದಿನಕ್ಕೆ ಹತ್ತು ಲಕ್ಷ ಬ್ಯಾರಲ್‌ಗಳಷ್ಟು ಕಡಿಮೆ ಮಾಡಿತು. ಇದೇ ಪ್ರಸ್ತುತ ಯುದ್ಧದ ಬಿಕ್ಕಟ್ಟಿನಲ್ಲಿ ಚೀನಾವನ್ನು ಕಾಪಾಡಿರುವುದು. ಚೀನಾದ ಕಂಪನಿಗಳು ವಿವಿಧ ರಾಷ್ಟ್ರಗಳಲ್ಲಿ ಎಲೆಕ್ಟ್ರಿಕ್ ವಾಹನ ತಯಾರಿಕೆ, ಚಾರ್ಜರ್, ಬ್ಯಾಟರಿ, ಸೌರಶಕ್ತಿ, ಪವನ ವಿದ್ಯುತ್ ಮತ್ತು ಇತರ ಶುದ್ಧ ಇಂಧನ ತಂತ್ರಜ್ಞಾನ ಕ್ಷೇತ್ರದಲ್ಲಿ 22,700 ಕೋಟಿ ಡಾಲರ್‌ಗಿಂತಲೂ ಹೆಚ್ಚು ಮೊತ್ತವನ್ನು ಹೂಡಿಕೆ ಮಾಡಲು ಮುಂದಾಗಿವೆ ಎಂದು ಜಾನ್ಸ್ ಹಾಪ್ಕಿನ್ಸ್‌ನ ಸಹಾಯ್ ಲ್ಯಾಬ್ ವರದಿ ತಿಳಿಸಿದೆ.

ಚೀನಾಕ್ಕೆ ಯುದ್ಧಕಾಲದ ಇಂಧನ ಬಿಕ್ಕಟ್ಟು ಅಷ್ಟಾಗಿ ತಾಗದಿರಲು ಕಾರಣ, ಅದರ ಮುಂಜಾಗ್ರತೆ ಮತ್ತು ದೀರ್ಘಕಾಲದ ಸಿದ್ಧತೆ. ಸಹಾಯ್ ಹೇಳುವಂತೆ, 2003ರಲ್ಲಿ ಇರಾಕ್ ಮೇಲೆ ಅಮೆರಿಕ ದಾಳಿ ಮಾಡಿದಾಗ, ತೈಲ ದರಗಳು ಬಹುಕಾಲದವರೆಗೆ ಏರಿಕೆ ಕಂಡಿದ್ದವು. ಅದರಿಂದ ಎಚ್ಚೆತ್ತುಕೊಂಡಿದ್ದ ಚೀನಾ, ಪರ್ಯಾಯಗಳನ್ನು ರೂಪಿಸಿಕೊಂಡಿತು. ಮುಂದಿನ ದಿನಮಾನಗಳಲ್ಲಿಯೂ ಇಂಧನದ ಆಘಾತಗಳು ಎದುರಾಗುತ್ತಲೇ ಇರುತ್ತವೆ. 'ಆ ಆಘಾತಕ್ಕೆ ವಿದ್ಯುತ್ ಆಧಾರಿತ ವ್ಯವಸ್ಥೆ ರೂಪಿಸುವುದೇ ಮದ್ದು' ಎಂದು ಅವರು ಹೇಳುತ್ತಾರೆ.

ಈ ಆಯ್ಕೆ ಅಮೆರಿಕದ ಗ್ರಾಹಕರಿಗೂ ಇದೆ. ಇ.ವಿ (ವಿದ್ಯುತ್ ಚಾಲಿತ ವಾಹನ) ಮತ್ತು ಹೀಟ್ ಪಂಪ್‌ಗಳು ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಸಿಗಲು ಅವಕಾಶ ಕಲ್ಪಿಸಿದ್ದ ಪ್ರೋತ್ಸಾಹ ಕ್ರಮಗಳನ್ನು ಟ್ರಂಪ್ ಆಡಳಿತವು ನಿಲ್ಲಿಸಿದೆ. ಹಾಗಿದ್ದರೂ, ಅಮೆರಿಕನ್ನರು ಶೀಘ್ರ ಇ.ವಿಗಳು ಮತ್ತು ಹೀಟ್ ಪಂಪ್‌ಗಳ ಬಗ್ಗೆ ಗಮನ ಹರಿಸುವ ಸಾಧ್ಯತೆ ಇದೆ.

ಕಳೆದ ವಾರ, ಜಗತ್ತಿನ ಅತಿ ದೊಡ್ಡ ವಾರ್ಷಿಕ ಇಂಧನ ಸಮಾವೇಶದಲ್ಲಿ ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಅವರು ಮಾತನಾಡಿದ್ದನ್ನು ನಾನು ಕೇಳಿದೆ. ತೈಲ ಮತ್ತು ಅನಿಲ ಉತ್ಪಾದನೆಯನ್ನು ಪ್ರೋತ್ಸಾಹಿಸುವ ಟ್ರಂಪ್ ಆಡಳಿತದ ಪ್ರಯತ್ನಗಳನ್ನು ಅವರು ಮಾನವೀಯತೆಯ ಯೋಜನೆ ಎನ್ನುವಂತೆ ಬಣ್ಣಿಸಿದರು. 'ಸತ್ಯ ಸರಳವಾಗಿದೆ; ಇಂಧನವೇ ಜೀವನ ಮತ್ತು ಜಗತ್ತಿಗೆ ಅದು ಬೃಹತ್ ಪ್ರಮಾಣದಲ್ಲಿ ಬೇಕು' ಎಂದು ಅವರು ಘೋಷಿಸಿದರು.

ಇಲ್ಲಿ ಒಂದು ದುರಂತದ ಛಾಯೆಯುಳ್ಳ ವ್ಯಂಗ್ಯವಿದೆ. ಟ್ರಂಪ್ ಆಡಳಿತವು ಯುದ್ಧವನ್ನು ಆರಂಭಿಸಿದ್ದರಿಂದ ಜಗತ್ತಿನ ಪ್ರತಿ ಮೂಲೆಯಲ್ಲೂ ಇಂಧನವು ದುಬಾರಿಯಾಗಿದ್ದು, ಅಪಾಯಕಾರಿ ಮಟ್ಟ ಮುಟ್ಟಿದೆ. ಇದು ಜನರ ಅನಗತ್ಯ ನರಳಿಕೆಗೆ ಕಾರಣವಾಗಿದೆ. ಇಂಧನ ಮತ್ತು ಅನಿಲಕ್ಕಾಗಿ ಇತರ ದೇಶಗಳನ್ನು ಅವಲಂಬಿಸುವುದು ಎಷ್ಟು ಅಪಾಯಕಾರಿ ಎನ್ನುವುದನ್ನು ಇತ್ತೀಚಿನ ಅಮೆರಿಕದ ಇತಿಹಾಸದಲ್ಲಿಯೇ ಅತ್ಯಂತ ಪಳೆಯುಳಿಕೆ ಇಂಧನಸ್ನೇಹಿ ಸರ್ಕಾರವು ಸಾಬೀತುಪಡಿಸಿದೆ ಮತ್ತು ಶುದ್ಧ, ವಿದ್ಯುತ್ ಆಧಾರಿತ ಭವಿಷ್ಯದೆಡೆಗೆ ಹೆಜ್ಜೆ ಹಾಕುವುದರಲ್ಲಿ ಇಂಧನ ಭದ್ರತೆ ಅಡಗಿದೆ ಎನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟಿದೆ.

ಮೂಲ: ದಿ ನ್ಯೂಯಾರ್ಕ್ ಟೈಮ್ಸ್

### ಸಹಜ ಸ್ಥಿತಿಗೆ ಬರಲು ವರ್ಷಗಳೇ ಬೇಕು

ಶುದ್ಧ ಇಂಧನದ ಬಳಕೆ ಈಗ ಬಹಳ ಮುಖ್ಯವಾಗುತ್ತದೆ. ಏಕೆಂದರೆ, ತೈಲ ಮತ್ತು ಅನಿಲದ ಪೂರೈಕೆ ಪ್ರಮಾಣ ಇರಾನ್ ಯುದ್ಧಕ್ಕೂ ಮೊದಲಿನ ಸ್ಥಿತಿಗೆ ಬರಲು ಹಲವು ವರ್ಷಗಳೇ ಬೇಕಾಗಬಹುದು. ಕತಾರಿನ ರಾಸ್ ಲಫಾನ್ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ರಫ್ತು ಘಟಕದ ಮೇಲೆ ಇರಾನ್ ಕ್ಷಿಪಣಿ ದಾಳಿ ಮಾಡಿದ ನಂತರ ದೇಶವು ಅನಿಲದ ಉತ್ಪಾದನೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿತು. ಇದರಿಂದಾಗಿ ಜಾಗತಿಕ ಮಾರುಕಟ್ಟೆಗೆ ಶೇ 20ರಷ್ಟು ಅನಿಲ ಪೂರೈಕೆ ಏಕಾಏಕಿ ನಿಂತುಹೋಯಿತು.

ಅಧಿಕಾರಿಗಳು ಹೇಳುವಂತೆ, ಆ ಘಟಕವನ್ನು ಮತ್ತೆ ಸೇವೆಗೆ ಸಜ್ಜುಗೊಳಿಸಲು ಮೂರರಿಂದ ಐದು ವರ್ಷ ಬೇಕು. ಈ ಪ್ರದೇಶದಲ್ಲಿನ ಇತರ ದೇಶಗಳು ಕೂಡ ದಾಸ್ತಾನು ಸ್ಥಳದ ಕೊರತೆ ಕಾರಣದಿಂದ ತೈಲ ಮತ್ತು ಅನಿಲದ ಉತ್ಪಾದನೆಯನ್ನು ಕಡಿತಗೊಳಿಸಿವೆ. ತೈಲ ಬಾವಿಗಳು ಯಥಾಸ್ಥಿತಿಗೆ ಹಿಂದಿರುಗುವುದು ಎಂದರೆ, ಸ್ವಿಚ್ ಹಾಕಿದರೆ ದೀಪ ಬೆಳಗುವಷ್ಟು ಸುಲಭವಲ್ಲ. ಅವು ಹಿಂದಿನ ಉತ್ಪಾದನಾ ಸಾಮರ್ಥ್ಯಕ್ಕೆ ಹಿಂದಿರುಗಲು ಹಲವು ತಿಂಗಳು ಬೇಕು. ಇದು ಪರ್ಯಾಯಗಳನ್ನು ಹುಡುಕಿಕೊಳ್ಳುವ ಒತ್ತಡ ಸೃಷ್ಟಿಸುತ್ತಿದೆ.

ಶುದ್ಧ ಇಂಧನ ವಲಯವೂ ಯುದ್ಧದಿಂದ ಹಲವು ವಿಧದಲ್ಲಿ ತೊಂದರೆಗೆ ಒಳಗಾಗಲಿದೆ. ಹಣದುಬ್ಬರ ಮತ್ತು ಬಡ್ಡಿದರ ಹೆಚ್ಚಾಗುತ್ತದೆ. ಇದರಿಂದಾಗಿ ಯೋಜನೆಗಳನ್ನು ಕೈಗೆತ್ತಿಕೊಂಡಿರುವವರಿಗೆ ವಿದ್ಯುತ್ ಉತ್ಪಾದನಾ ಘಟಕ, ಗ್ರಿಡ್ ಸ್ಥಾಪನೆಗೆ ಹಣಕಾಸು ಒದಗಿಸುವುದು ಕಷ್ಟಕರವಾಗಬಹುದು. ಪರಿವರ್ತಕಗಳು, ಅಲ್ಯುಮಿನಿಯಂ ಮತ್ತು ತಾಮ್ರದ ತಂತಿಯಂಥ ಪ್ರಮುಖ ವಸ್ತುಗಳ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಬಹುದು. ಈ ಸಂದಿಗ್ಧ ಸಮಯದಲ್ಲಿ ಇಂಧನ ಮೂಲಸೌಕರ್ಯ ಅಭಿವೃದ್ಧಿ- ಅದು ಮಾಲಿನ್ಯಕಾರಕ ಇಂಧನ ಮೂಲಸೌಕರ್ಯ ಇರಲಿ ಅಥವಾ ಶುದ್ಧ ಇಂಧನ ವ್ಯವಸ್ಥೆ ಆಗಲಿ- ಜಟಿಲವಾಗಲಿವೆ ಮತ್ತು ದುಬಾರಿಯಾಗಲಿವೆ.

'ಭಾರತದಂತಹ ದೇಶಗಳು ಕಲ್ಲಿದ್ದಲಿಗಾಗಿ ನಿರ್ಮಿಸಲಾದ ವಿದ್ಯುತ್ ಗ್ರಿಡ್‌ಗಳನ್ನು ಹೆಚ್ಚಿನ ಪ್ರಮಾಣದ ಗಾಳಿ ಮತ್ತು ಸೌರಶಕ್ತಿಗೆ ಹೊಂದಿಕೊಳ್ಳುವಂತೆ ಬದಲಾಯಿಸಬೇಕಾಗುತ್ತದೆ. ಶುದ್ಧ ಇಂಧನ ತಂತ್ರಜ್ಞಾನಕ್ಕೆ ಬೇಡಿಕೆ ಹೆಚ್ಚಾಗುವುದರಿಂದ, ಸೌರ ಫಲಕಗಳು, ಉಷ್ಣ ಪಂಪ್ ಮತ್ತು ಎಲೆಕ್ಟ್ರಿಕ್ ವಾಹನಗಳನ್ನು ದೊಡ್ಡ ಮಟ್ಟದಲ್ಲಿ ಉತ್ಪಾದಿಸಲು ಸರ್ಕಾರವು ತನ್ನ ಕಾರ್ಖಾನೆಗಳಲ್ಲಿ ಎಷ್ಟು ಬಂಡವಾಳ ಹೂಡಬೇಕು ಎನ್ನುವುದನ್ನು ನಿರ್ಧರಿಸಬೇಕಾಗುತ್ತದೆ. ಜತೆಗೆ, ಈ ವಸ್ತುಗಳನ್ನು ಆಮದು ಮಾಡಿಕೊಂಡರೆ, ಅವುಗಳಿಗೆ ಎಷ್ಟು ತೆರಿಗೆ ವಿಧಿಸಬೇಕಾಗುತ್ತದೆ ಎನ್ನುವುದನ್ನೂ ತೀರ್ಮಾನಿಸಬೇಕಾಗುತ್ತದೆ' ಎನ್ನುತ್ತಾರೆ ಜಾನ್ಸ್ ಹಾಪ್ಕಿನ್ಸ್‌ನ ನೆಟ್ ಜೀರೋ ಇಂಡಸ್ಟ್ರಿಯಲ್ ಪಾಲಿಸಿಯ ಸಹನಿರ್ದೇಶಕ ಟಿಮ್ ಸಹಾಯ್.

ಆದರೆ, ದೇಶಗಳು ಮತ್ತು ಕಂಪನಿಗಳು ಅನಿಲ ದ್ರವೀಕರಣ ಟರ್ಮಿನಲ್‌ಗಳು, ಪೈಪ್‌ಲೈನ್‌ಗಳು ಮತ್ತು ಇಂಧನ ಘಟಕಗಳನ್ನು ನಿರ್ಮಿಸುವುದಕ್ಕಿಂತ ವೇಗವಾಗಿ ನವೀಕರಿಸಬಹುದಾದ ಇಂಧನ ಘಟಕಗಳನ್ನು ನಿರ್ಮಿಸಬಹುದು.

## ❖ ಬಿಇಎಂಎಲ್: ಮೈಸೂರು ಘಟಕದಿಂದ 35 ಟನ್ ಎಲೆಕ್ಟ್ರಿಕ್ ಡಂಪ್ ಟ್ರಕ್

**ಸಂದರ್ಭ: ರಕ್ಷಣಾ ಸಚಿವಾಲಯದ ಪಿಎಸ್‌ಯು ಕಂಪನಿಯಾದ ಬಿಇಎಂಎಲ್ ದೇಶದ ಮೊದಲ ಸ್ವದೇಶಿ ನಿರ್ಮಿತ 35 ಟನ್ ಎಲೆಕ್ಟ್ರಿಕ್ ಡಂಪ್ ಟ್ರಕ್ ಅನ್ನು ಇಲ್ಲಿನ ತನ್ನ ಸಂಕೀರ್ಣದಲ್ಲಿ ಶುಕ್ರವಾರ ಅನಾವರಣಗೊಳಿಸಿತು.**

- ಬಿಇಎಂಎಲ್ ಲಿಮಿಟೆಡ್ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್, ಎಸ್‌ಬಿಯು ಮುಖ್ಯಸ್ಥರು, ನಿರ್ದೇಶಕರಾದ (ಗಣಿಗಾರಿಕೆ ಮತ್ತು ನಿರ್ಮಾಣ) ಸಂಜಯ್ ಸೋಮ್ ಮತ್ತು ಮೇಧಾ ಅವರು ಅನಾವರಣಗೊಳಿಸಿದರು.

- 'ಮೈಸೂರಿನ ಘಟಕದಲ್ಲಿ ನಿರ್ಮಿಸಲಾದ ಈ ಟ್ರಿಕ್. ಸುಸ್ಥಿರ ಗಣಿಗಾರಿಕೆ ಮತ್ತು ಮೂಲಸೌಕರ್ಯ ಪರಿಹಾರಗಳತ್ತ ಪ್ರಮುಖ ಹೆಜ್ಜೆಯಾಗಿದೆ. ಇದರೊಂದಿಗೆ ಮಹತ್ವದ ಮೈಲಿಗಲ್ಲು ಸ್ಥಾಪಿಸಿದಂತಾಗಿದೆ' ಎಂದು ಕಂಪನಿ ತಿಳಿಸಿದೆ.
- 'ಈ ಎಲೆಕ್ಟ್ರಿಕ್ ಡಂಪ್ ಟ್ರಕ್ ಅನ್ನು ಶೂನ್ಯ ಟೈಲ್ ಪೈಪ್ ಹೊರಸೂಸುವಿಕೆಯೊಂದಿಗೆ ಹೆಚ್ಚಿನ ಉತ್ಪಾದಕತೆ ನೀಡಲು ವಿನ್ಯಾಸಗೊಳಿಸಲಾಗಿದೆ. ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಇಂಗಾಲ ಕಡಿತ ಗುರಿಯೊಂದಿಗೆ ತಯಾರಿಸಲಾಗಿದೆ. ಹೆಚ್ಚಿನ ದಕ್ಷತೆಯ ಪರ್ಮನೆಂಟ್ ಮ್ಯಾಗ್ನೆಟ್ ಸಿಂಕ್ರೋನಸ್ ಮೋಟಾರ್ (ಪಿಎಂಎಸ್‌ಎಂ)ನಿಂದ ಚಾಲಿತವಾಗಿದೆ ಗಣಿಗಾರಿಕೆ ಪರಿಸರದಲ್ಲಿ ಕಾರ್ಯಾಚರಣೆಗಾಗಿ ವಿನ್ಯಾಸಗೊಳಿಸಲಾಗಿದೆ' ಎಂದು ಮಾಹಿತಿ ನೀಡಿದೆ.
- 35 ಟನ್‌ಗಳ ಪೇಲೋಡ್ ಸಾಮರ್ಥ್ಯ ಮತ್ತು ಸುಮಾರು 60 ಟನ್‌ಗಳ ಒಟ್ಟು ವಾಹನ ತೂಕ ಹೊಂದಿದೆ. ಸಾಂಪ್ರದಾಯಿಕ ಡೀಸೆಲ್-ಚಾಲಿತ ವಾಹನಗಳಿಗಿಂತ ಹೆಚ್ಚಿನ ದಕ್ಷತೆ ಹೊಂದಿದೆ 60ರಿಂದ 90 ನಿಮಿಷಗಳಲ್ಲಿ ಶೇ 80ರಷ್ಟು ಚಾರ್ಜ್ ಆಗುತ್ತದೆ' ಎಂದು ಕಂಪನಿಯ ಪ್ರಕಟಣೆ ತಿಳಿಸಿದ.

## ❖ ಜಿಡಿಪಿ: ಶೇ 6.9ರಷ್ಟು ಪ್ರಗತಿ-ಎಡಿಬಿ

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ 6.9 ಮತ್ತು 2027-28ರಲ್ಲಿ ಶೇ 7.3ರಷ್ಟಾಗಲಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಅಂದಾಜಿಸಿದೆ.**

- ದೇಶದಲ್ಲಿ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಸದೃಢವಾಗಿರುವುದೇ ಪ್ರಗತಿ ಏರಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ. ಈ ಮೊದಲು 2026-27ರಲ್ಲಿ ಜಿಡಿಪಿ ಬೆಳವಣಿಗೆ ಶೇ 6.5ರಷ್ಟು ಇರಲಿದೆ ಎಂದು ಹೇಳಿತ್ತು.
- ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ದರ ಹೆಚ್ಚಳವಾಗಿದೆ ಮತ್ತು ವ್ಯಾಪಾರಕ್ಕೆ ಅಡಚಣೆ ಉಂಟಾಗಿದೆ. ಇದು ದೇಶದ ಬೆಳವಣಿಗೆಯ ಮೇಲೆ ಒತ್ತಡ ಉಂಟು ಮಾಡಬಹುದು ಎಂದು ಹೇಳಿದೆ.

## ❖ ನಿವಾಸದಲ್ಲಿ ಹಣ ಪತ್ತೆಯಾಗಿದ್ದ ಪ್ರಕರಣL ರಾಷ್ಟ್ರಪತಿಗೆ ರಾಜೀನಾಮೆ ಸಲ್ಲಿಕೆ: ಪದಚ್ಯುತಿ ಪ್ರಕ್ರಿಯೆ: ವರ್ಮಾ ರಾಜೀನಾಮೆ

**ಪದಚ್ಯುತಿ ಪ್ರಕ್ರಿಯೆ ಏನಾಗಲಿದೆ?**

- ನ್ಯಾಯಮೂರ್ತಿ ಯಶವಂತ ವರ್ಮಾ ಅವರ ರಾಜೀನಾಮೆಯಿಂದಾಗಿ, ಈಗಾಗಲೇ ಲೋಕಸಭೆಯಲ್ಲಿ ಆರಂಭವಾಗಿರುವ ಪದಚ್ಯುತಿಯ ಪ್ರಕ್ರಿಯೆಗಳು ನಿಷ್ಪ್ರಯೋಜಕವಾಗಲಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.
- ಭ್ರಷ್ಟಾಚಾರ ಆರೋಪ ಹೊತ್ತಿ ರುವ ನ್ಯಾಯಮೂರ್ತಿಗೆ ಸಂಸತ್ತಿನಲ್ಲಿ ಪದಚ್ಯುತಿ ಪ್ರಕ್ರಿಯೆಯನ್ನು ತಡೆಯಲು ಉಳಿದಿದ್ದ ಏಕೈಕ ಮಾರ್ಗ ರಾಜೀನಾಮೆ ಯಾಗಿತ್ತು ಎಂದು ವಿವರಿಸಿದ್ದಾರೆ.
- ಪಿಂಚಣಿ, ಸೌಲಭ್ಯಕ್ಕೆ ಅರ್ಹರು ನ್ಯಾಯಮೂರ್ತಿಯು ರಾಜೀನಾಮೆ ಮೂಲಕ ಹುದ್ದೆ ತೊರೆದರೆ, ಅವರು ಪಿಂಚಣಿ ಮತ್ತು ಸೌಲಭ್ಯಗಳಿಗೆ ಅರ್ಹರಾಗುತ್ತಾರೆ. ಆದರೆ ಸಂಸತ್ತು ಪದಚ್ಯುತಗೊಳಿಸಿದರೆ ಪಿಂಚಣಿ ಮತ್ತು ಇತರ ಸೌಲಭ್ಯಗಳಿಂದ ವಂಚಿತರಾಗುತ್ತಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.
- **ಸಂವಿಧಾನದ 217ನೇ ವಿಧಿಯ ಪ್ರಕಾರ ನ್ಯಾಯಮೂರ್ತಿಗಳು ರಾಷ್ಟ್ರಪತಿಯವರಿಗೆ ತಮ್ಮ ಕೈಬರಹದ ಮೂಲಕ ರಾಜೀನಾಮೆ ಪತ್ರ ಬರೆದು ಸಲ್ಲಿಸಬಹುದು. ಇದಕ್ಕೆ ಯಾವುದೇ ಅನುಮೋದನೆಯ ಅಗತ್ಯ ಇರುವುದಿಲ್ಲ**. ಆದರೆ ನ್ಯಾಯಮೂರ್ತಿ ಯವರು ರಾಜೀನಾಮೆ ಪತ್ರದಲ್ಲಿ ನಿರ್ದಿಷ್ಟ ದಿನಾಂಕವನ್ನು ಉಲ್ಲೇಖಿಸಿದ್ದರೆ. ಆ ದಿನಾಂಕಕ್ಕೂ ಮುನ್ನ ಅವರು ರಾಜೀನಾಮೆಯನ್ನು ಹಿಂಪಡೆಯಲು ಅವಕಾಶ ಹೊಂದಿರುತ್ತಾರೆ ಎಂದು ಅವರು ಹೇಳಿದ್ದಾರೆ.

Dr. Rajkumar's KAS Academy

- ಕ್ರಿಮಿನಲ್ ಪ್ರಕರಣ ದಾಖಲಿಸ ಬಹುದು ರಾಜೀನಾಮೆ ನೀಡಿರುವುದರಿಂದ ನ್ಯಾ. ವರ್ಮಾ ಅವರುಈಗ ಸಾಂವಿಧಾನಿಕ ಹುದ್ದೆ ಯಲಿಲ್ಲ. ಹೀಗಾಗಿ ಸರ್ಕಾರ ಅಗತ್ಯವೆನಿಸಿದರೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಬಹುದು ಎಂದು ಅವರು ತಿಳಿಸಿದ್ದಾರೆ. ಈ ಹಿಂದೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿ. ರಾಮಸ್ವಾಮಿ ಮತ್ತು ಕಲ್ಕತ್ತ ಹೈಕೋರ್ಟ್ ನ್ಯಾಯಮೂರ್ತಿ ಸೌಮಿತ್ರ ಸೇನ್ ಅವರೂ ಸಂಸತ್ತಿನಲ್ಲಿ ಪದಚ್ಯುತ ಪ್ರಕ್ರಿಯೆ ಎದುರಿಸಿದ್ದರು. ಆದರೆ ಈ ಇಬ್ಬರೂ ತಮ್ಮ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿದ್ದರು.

## ❖ ಬಾಕ್ಸಿಂಗ್: ವಿಶ್ವನಾಥ್‌ಗೆ ಸ್ವರ್ಣ; ಸಚಿನ್‌ಗೆ ಬೆಳ್ಳಿ

**ಸಂದರ್ಭ: ಭಾರತದ ಉದಯೋನ್ಮುಖ ತಾರೆ ವಿಶ್ವನಾಥ್ ಸುರೇಶ್ ಅವರು ಮುಕ್ತಾಯವಾದ ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸ್ವರ್ಣ ಜಯಿಸಿದರು. ಅದರೊಂದಿಗೆ, ಭಾರತದ ಬಾಕ್ಸರ್‌ಗಳು 5 ಚಿನ್ನ ಸೇರಿ 16 ಪದಕಗಳನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.**

- ತಮಿಳುನಾಡಿನ ಪೆರಂಬೂರಿನ ವಿಶ್ವನಾಥ್ ಅವರು ಪುರುಷರ 50 ಕೆ.ಜಿ. ವಿಭಾಗದ ಚಿನ್ನದ ಪದಕದ 'ಬೌಟ್'ನಲ್ಲಿ 5-0ಯಿಂದ ಸರ್ವಾನುಮತದ ತೀರ್ಪಿನಲ್ಲಿ ಜಪಾನ್‌ನ ದೈಚಿ ಇವಾಯಿ ಅವರನ್ನು ಸೋಲಿಸಿದರು.
- ವಿಶ್ವನಾಥ್ ಅವರು ಮಾಜಿ ಬಾಕ್ಸರ್ ಸುರೇಶ್ ಬಾಬು ಅವರ ಪುತ್ರ. ಸದ್ಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಟೂರ್ನಿಯ ಎಂಟರ ಘಟ್ಟದಲ್ಲಿ 5-0ಯಿಂದ ವಿಶ್ವದ ಅಗ್ರಮಾನ್ಯ ಬಾಕ್ಸರ್, ಕಜಾಕಸ್ತಾನದ ಸಂಝಾರ್ ತಾಷ್ಕೆಂಬೆ ಅವರಿಗೆ ಆಘಾತ ನೀಡಿ, ಗಮನ ಸೆಳೆದಿದ್ದರು.
- 60 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿದಿದ್ದ ಸಚಿನ್ ಅವರು ಫೈನಲ್‌ನಲ್ಲಿ ಹೋರಾಟ ತೋರಿದರಾದರೂ 2-3ರಿಂದ ಕಜಾಕಸ್ತಾನದ ಒರಜ್‌ಬೆಕ್ ಅಸಿಲ್‌ಕುಲೊವ್ ವಿರುದ್ಧ ಪರಾಭವಗೊಂಡರು.
- ಭಾರತವು ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆಯಿತು. 6 ಚಿನ್ನ ಗೆದ್ದ ಕಜಾಕಸ್ತಾನ ಅಗ್ರಸ್ಥಾನ ಪಡೆದುಕೊಂಡಿತು. ಒಟ್ಟಾರೆ ಪದಕಗಳ ಸಂಖ್ಯೆಯಲ್ಲಿ ಭಾರತ (16) ಅಗ್ರಸ್ಥಾನಿಯಾಯಿತು.

Dr. Rajkumar IAS/KAS Academy

-----------------------------------------ಶುಭವಂದನೆಗಳು-----------------------------------------